ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

ಸುತ್ತೂರು ವಾರ್ತೆ

ಉಚಿತ ಪ್ರಸಾದ ಸಂಪುಟ : 14 ಸಂಚಿಕೆ : 2 ಪುಟ 8 ಸುತ್ತೂರು ಶ್ರೀಕ್ಷೇತ್ರ ಮಂಗಳವಾರ, 21 ಜನವರಿ 2020

ಇಂದಿನಿಂದ ಸುತ್ತೂರು ಜಾತ್ರೆಯ ಸಡಗರ

ಸುತ್ತೂರು ಶ್ರೀಕ್ಷೇತ್ರ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಇದೇ ಜನವರಿ 21 ಮಂಗಳವಾರದಿಂದ 26 ಭಾನುವಾರದವರೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.

ಸೋಮವಾರ ಬೆಳಗ್ಗೆ ಜಾತ್ರಾ ಮಹೋತ್ಸವದ ಅಂಗವಾಗಿ ಮಹಾದಾಸೋಹದ ಕೊಪ್ಪರಿಗೆಗೆ ಪಡಿಪದಾರ್ಥಗಳನ್ನು ಸಮರ್ಪಿಸುತ್ತಿರುವ ಜಗದ್ಗುರುಗಳವರು ಚಿತ್ರದಲ್ಲಿ ಹರಗುರು ಚರಮೂರ್ತಿಗಳು ಹಾಗೂ ಭಕ್ತಾದಿಗಳು.

ಮಠಾಧೀಶರು, ಗಣ್ಯರು, ಅತಿಥಿಗಳ ಆಗಮನ

21 ಜನವರಿ 2020ನೇ ಮಂಗಳವಾರ ಸಂಜೆ 4.00 ಗಂಟೆಗೆ ವಸ್ತುಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ, ದೇಸಿ ಆಟಗಳು, ದೋಣಿ ವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ, ಕ್ಯಾನ್ಸರ್ ತಪಾಸಣಾ ಶಿಬಿರ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಂಡಿದ್ದು, ಕಾರ್ಯಕ್ರಮದಲ್ಲಿ ಹರಗುರು ಚರಮೂರ್ತಿಗಳಾದ ಸೊಲ್ಲಾಪುರದ ಸಂಸದರು ಹಾಗೂ ಗೌಡಗಾಂವ್‌ನ ಶ್ರೀ ಹಿರೇಮಠದ ಷ.ಬ್ರ. ಡಾ. ಶ್ರೀ ಜಯಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಹಾಗೂ ಹೊನ್ನಾಳಿಯ ಶ್ರೀ ಹಿರೇಕಲ್ಮಠದ ಷ.ಬ್ರ. ಡಾ. ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾ ಚಾರ್ಯಸ್ವಾಮಿಗಳು ದಿವ್ಯ ಸಮ್ಮುಖ ವಹಿಸಲಿದ್ದಾರೆ.

ಅಧ್ಯಕ್ಷತೆಯನ್ನು ಮಾಜಿ ಕೇಂದ್ರ ಸಚಿವರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪಮೊಯ್ಲಿರವರು ವಹಿಸಲಿದ್ದಾರೆ. ವಸ್ತುಪ್ರದರ್ಶನದ ಉದ್ಘಾಟನೆಯನ್ನು ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ. ಕಾರಜೋಳರವರು ನೆರವೇರಿಸಲಿದ್ದು, ಕೃಷಿಮೇಳದ ಉದ್ಘಾಟನೆಯನ್ನು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿರವರು ನೆರವೇರಿಸಲಿದ್ದಾರೆ. ಸಾಂಸ್ಕೃತಿಕಮೇಳ ಉದ್ಘಾಟನೆಯನ್ನು ಲೋಕಸಭಾ ಸದಸ್ಯರು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್‌ಕುಮಾರ್ ಕಟೀಲ್‌ರವರು ಮಾಡಲಿದ್ದು,

ದೇಸಿ ಆಟಗಳ ಉದ್ಘಾಟನೆಯನ್ನು ಮಹಿಳಾ, ಮಕ್ಕಳ ಅಭಿವೃದ್ಧಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾದ ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆರವರು ನೆರವೇರಿಸಲಿದ್ದಾರೆ. ದೋಣಿವಿಹಾರ ಉದ್ಘಾಟನೆಯನ್ನು ಸಂಸದರು ಮತ್ತು ಕರ್ನಾಟಕ ಸಹಕಾರ ಎಣ್ಣೆಬೀಜ ಉತ್ಪಾದಕರ ಸಂಘದ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ್ ಎಸ್. ಜೊಲ್ಲೆರವರು ಮಾಡಲಿದ್ದಾರೆ. ರಂಗೋಲಿ ಸ್ಪರ್ಧೆ ಉದ್ಘಾಟನೆಯನ್ನು ಮಾಜಿ ಸಚಿವರಾದ ಶ್ರೀಮತಿ ರಾಣಿಸತೀಶ್‌ರವರು ನೆರವೇರಿಸಲಿದ್ದು, ಸೋಬಾನೆ ಪದ ಸ್ಪರ್ಧೆ ಉದ್ಘಾಟನೆಯನ್ನು ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಮಾಡಲಿದ್ದಾರೆ. ಕ್ಯಾನ್ಸರ್ ತಪಾಸಣಾ ಶಿಬಿರದ ಉದ್ಘಾಟನೆಯನ್ನು ಬಿಜೆಪಿ ಯುವ ಮೋರ್ಚಾದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ವೈ. ವಿಜಯೇಂದ್ರರವರು ನೆರವೇರಿಸಲಿದ್ದಾರೆ. 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ಎಚ್.ಎಸ್. ವೆಂಕಟೇಶಮೂರ್ತಿರವರನ್ನು ಕಾರ್ಯಕ್ರಮದಲ್ಲಿ ಗೌರವಿಸಿ ಅಭಿನಂದಿಸಲಾಗುವುದು.



ಮುಖ್ಯ ಅತಿಥಿಗಳಾಗಿ ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ವಾಸು, ದೊಡ್ಡಬಳ್ಳಾಪುರದ ವಿಧಾನಸಭಾ ಸದಸ್ಯರಾದ ಶ್ರೀ ಟಿ. ವೆಂಕಟ ರಮಣಯ್ಯ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರಾದ ....ಇನ್ನಷ್ಟು ಸುದ್ದಿಗಳು ಪುಟ 6, 7, 8ರಲ್ಲಿ



ಜಾತ್ರೆಗೆ ವಿಶೇಷ ಸಾರಿಗೆ ಸೌಲಭ್ಯ

ಜನವರಿ 21 ರಿಂದ 26 ರವರೆಗೆ ಸುತ್ತೂರಿನಲ್ಲಿ ನಡೆಯಲಿರುವ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವಕ್ಕೆ ಹೋಗಿ ಬರುವವರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಮೈಸೂರು ನಗರಸಾರಿಗೆ ವಿಭಾಗವು ವಿವಿಧೆಡೆಯಿಂದ ಸುತ್ತೂರಿಗೆ ಹೆಚ್ಚುವರಿ ಬಸ್ ಸೌಲಭ್ಯವನ್ನು ಕಲ್ಪಿಸಿದ್ದಾರೆ. ನಗರಸಾರಿಗೆ ವೋಲ್ವೋ ಮತ್ತು ಸಾಮಾನ್ಯ ಬಸ್‌ಗಳು ಈ ಕೆಳಕಂಡಂತೆ ಸಂಚರಿಸಲಿವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ. ರೈಲ್ವೆ ನಿಲ್ದಾಣ–ನಗರ ನಿಲ್ದಾಣ–ಆಲನಹಳ್ಳಿ–ವರುಣ, ಹೊಸ ಕೋಟೆ–ಸುತ್ತೂರು. ನಗರ ಬಸ್ ನಿಲ್ದಾಣ–ಹೊಸ ಹುಂಡಿ–ದೇವಲಾಪುರ–ಆಯರಹಳ್ಳಿ–ಸುತ್ತೂರು. ಸಾರ್ವಜನಿಕ ಪ್ರಯಾಣಿಕರು ಈ ಸಾರಿಗೆಯ ಸದುಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.

ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನ

ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಜೆಎಸ್ಎಸ್ ಸಾಮಾನ್ಯ ಶಿಕ್ಷಣ ವಿಭಾಗದ ವತಿಯಿಂದ ಏರ್ಪಡಿಸಲಾಗುವ ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನದಲ್ಲಿ ಒಟ್ಟು 9 ವಿಭಾಗಗಳಲ್ಲಿ 187 ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸುತ್ತಿದ್ದಾರೆ.

ಭೌತವಿಜ್ಞಾನದ ಕಲಿಕೆಯ ಅಗತ್ಯತೆ ಇಂದು ಹೆಚ್ಚಾಗಿದೆ ಏಕೆಂದರೆ ಇದು ನಮ್ಮ ದೈನಂದಿನ ಬದುಕಿಗೆ ಅನುಕೂಲವಾದ ಮೂಲವಿಜ್ಞಾನದ ಸ್ವರೂಪವಾಗಿದ್ದು, ಜಗತ್ತಿನ ಎಲ್ಲಾ ಆಗುಹೋಗುಗಳು ಭೌತವಿಜ್ಞಾನದ ನಿಯಮದ ಪ್ರಕಾರವೇ ನಡೆಯುತ್ತಿವೆ. ಆದ್ದರಿಂದ ಭೌತವಿಜ್ಞಾನ ವಿಭಾಗದಿಂದ ಹಲವಾರು ಮಾದರಿಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಅವುಗಳಲ್ಲಿ ಸುತ್ತೂರು ಶಾಲೆಯ ವಿದ್ಯಾರ್ಥಿಗಳು ತಯಾರಿಸಿರುವ ಅತಿ ವೇಗದ ಚಲನೆಯಿಂದ ಸಮಯ ಮತ್ತು ಇಂಧನದ ಉಳಿತಾಯ ಮಾಡುವ ಮ್ಯಾಗ್ಲೆವ್ ಟ್ರೈನ್ ಎಲ್ಲರ ಗಮನ ಸೆಳೆಯುತ್ತದೆ.

ಮೇಟಿಕುಪ್ಪೆ ಶಾಲೆಯ ವಿದ್ಯಾರ್ಥಿಗಳು ಸೌರಶಕ್ತಿ ಎಂಬ ಮಾದರಿಯ ಮೂಲಕ ಜನಸಂಖ್ಯಾ ಸ್ಫೋಟ, ಕೈಗಾರಿಕೆಗಳ ಅಭಿವೃದ್ಧಿ ಮತ್ತು ಮಳೆಯ ಅಭಾವದ ಕಾರಣ ವಿದ್ಯುತ್ ಶಕ್ತಿಗೆ ಹೆಚ್ಚು ಬೇಡಿಕೆ ಇದ್ದು ವಿದ್ಯುತ್ ಕೊರತೆ ಉಂಟಾದಾಗ ನವೀಕರಿಸುವ ಸಂಪನ್ಮೂಲಗಳ ಉಪಯೋಗ ಮತ್ತು ಮಹತ್ವ ತಿಳಿಸಿಕೊಡುವರು. ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಲಂಬ ಅಕ್ಷದ ವಿಂಡ್ ಟರ್ಬೈನ್ ಮಾದರಿಯ ಮೂಲಕ ಭವಿಷ್ಯತ್ ಕಾಲದಲ್ಲಿ ಉಪಯೋಗಿಸಿ ಕೊಳ್ಳಲೇಬೇಕಾಗಿರುವ ಸಂಪನ್ಮೂಲಗಳ ಬಗ್ಗೆ ಆಕರ್ಷಕವಾಗಿ ವಿವರಿಸುವರು. ಚಲನಶಕ್ತಿಯಿಂದ ವಿದ್ಯುತ್ ಉತ್ಪಾದನೆ ಎಂಬ ಮಾದರಿಯ ಮೂಲಕ ರಾಮಾಪುರ ಶಾಲೆಯ ಮಕ್ಕಳು ರಸ್ತೆಯಲ್ಲಿ ಚಲಿಸುವ ವಾಹನಗಳಿಂದ ಉಂಟಾಗುವ ಗಾಳಿಯಿಂದ ವಿದ್ಯುತ್ತನ್ನು ತಯಾರಿಸುವ ಬಗ್ಗೆ ಮಾಹಿತಿ ನೀಡಿವರು. ಹೊರೆಯಾಲ ಶಾಲೆಯ ಮಕ್ಕಳು ವಿದ್ಯುತ್ ಬಲ್ಬ್‌ಗಳ ಸಾಮರ್ಥ್ಯವನ್ನು ಪ್ರಯೋಗಗಳ ಮೂಲಕ ಪ್ರದರ್ಶಿಸುವರು.

ಗುಂಡ್ಲುಪೇಟೆ ಶಾಲೆಯ ಮಕ್ಕಳು ಸುರಕ್ಷತೆ ಮತ್ತು ಸಂರಕ್ಷಣೆ ಮಾದರಿಯ ಮೂಲಕ ರಸ್ತೆಯ ತಿರುವುಗಳಲ್ಲಿ ಅಪಘಾತ ವನ್ನು ತಪ್ಪಿಸುವ ವಿಧಾನವನ್ನು ವಿವರಿಸುವರು. ಉಮ್ಮತ್ತೂರು ಶಾಲೆಯ ವಿದ್ಯಾರ್ಥಿಗಳು ಸ್ಲೈಡ್‌ಪ್ರೊಜೆಕ್ಟರ್ ಎಂಬ ಮಾದರಿಯ ಮೂಲಕ ಇತ್ತೀಚಿನ ದಿನಗಳಲ್ಲಿ ಪ್ರೊಜೆಕ್ಟರ್‌ನ ಮಹತ್ವ ಮತ್ತು ಕಾರ್ಯವಿಧಾನವನ್ನು ಆಕರ್ಷಕವಾಗಿ ವಿವರಿಸುವರು.

ಹೈಡ್ರಾಲಿಕ್ ಪವರ್ ಬ್ರೇಕ್ ಮಾದರಿಯ ಮೂಲಕ ಅರಕಲವಾಡಿ ಶಾಲೆಯ ವಿದ್ಯಾರ್ಥಿಗಳು ವಾಹನಗಳಲ್ಲಿ ಬಳಸುವ ವಿವಿಧ ಬ್ರೇಕ್‌ಗಳ ಬಗ್ಗೆ ವಿವರಿಸುವರು. ಕೆ.ಆರ್. ನಗರ ಶಾಲೆಯ ವಿದ್ಯಾರ್ಥಿಗಳು ತಯಾರಿಸಿರುವ 'ಸ್ವಯಂ ಚಾಲಿತ ವಿದ್ಯುತ್ ದೀಪ' ಮಾದರಿಯ ಮೂಲಕ ವಿದ್ಯುತ್ ಉಳಿತಾಯ ಕುರಿತು ಮಾಹಿತಿ ನೀಡುವರು. ಲಕ್ಷ್ಮೀಪುರಂ ಶಾಲೆಯ ವಿದ್ಯಾರ್ಥಿಗಳು ಪರಿಸರ ಸ್ನೇಹಿ ಶಕ್ತಿ ಸಂಪನ್ಮೂಲಗಳನ್ನು ಉಪಯೋಗಿಸುವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಗಮನಾರ್ಹ ವಾಗಿರುತ್ತದೆ.

ಸಿದ್ಧಾರ್ಥನಗರ ಶಾಲೆಯ ವಿದ್ಯಾರ್ಥಿ ಗಳು ಭೂಮಿಯ ಮೇಲೆ ಪ್ರಯಾಣಿಸುವ ಮತ್ತು ನೀರಿನಲ್ಲಿ ಕಾರ್ಯನಿರ್ವಹಿಸುವ ಕಾರಿನ ಬಗ್ಗೆ ಮಾಹಿತಿ ನೀಡುವರು. ನಂಜನಗೂಡು ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮಹತ್ವ ಮತ್ತು ಕಾರ್ಯವಿಧಾನಗಳ ಬಗ್ಗೆ ವಿವರಿಸುವುದು ಆಕರ್ಷಣೀಯವಾಗಿದೆ.

ವಸ್ತುಪ್ರದರ್ಶನದ ಎಲ್ಲಾ ವಿದ್ಯಾರ್ಥಿಗಳು ಜಾತ್ರೆಯನ್ನು ನೋಡಲು ಬಂದ ಜನ ಸಾಗರಕ್ಕೆ ತಿಳುವಳಿಕೆ ನೀಡುವಲ್ಲಿ ಮತ್ತು ಅರಿವು ಮೂಡಿಸುವಲ್ಲಿ ಉತ್ಸುಕರಾಗಿದ್ದಾರೆ.

ಜಾತ್ರೋತ್ಸವದಲ್ಲಿ ಹರಗುರು ಚರಮೂರ್ತಿಗಳು, ಅಧಿಕಾರಿ ವರ್ಗದವರು, ಸಾರ್ವಜನಿಕರು, ಭಕ್ತಾದಿಗಳು, ಶಾಲಾ ವಿದ್ಯಾರ್ಥಿಗಳು ವಸ್ತುಪ್ರದರ್ಶನದ ಮಾದರಿಗಳನ್ನು ವೀಕ್ಷಿಸಲಿದ್ದಾರೆ.

ಜಾತ್ರೆಯೊಳಗೊಂದು ಸುತ್ತು

ಸುತ್ತೂರು ಒಂದು ಧಾರ್ಮಿಕ ಕ್ಷೇತ್ರ, ನಾಲ್ಕು ವರ್ಷ ಗಳಿಂದ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸು ತ್ತಿದ್ದೇನೆ. ಹಾಗೂ ದಾಸೋಹ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದೇನೆ. ಈ ಕಾರ್ಯವು ನನ್ನ ಮನಸ್ಸಿಗೆ ತೃಪ್ತಿ ನೀಡಿದೆ. ಶ್ರೀಮಠವು ಈ ಅವಕಾಶವನ್ನು ಒದಗಿಸಿರುವುದು ನನ್ನ ಭಾಗ್ಯವೆಂದು ಭಾವಿಸುತ್ತೇನೆ. – **ಶ್ರೀ ಕುಮಾರ್, ನಂಜನಗೂಡು**

* * *

ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಶ್ರೀಕ್ಷೇತ್ರದ ಸುರಕ್ಷತೆ ನಮ್ಮ ಜವಾಬ್ದಾರಿ, ಎರಡು ವರ್ಷಗಳಿಂದ ಪೊಲೀಸ್ ಪೇದೆಯಾಗಿ ಈ ಜವಬ್ದಾರಿಯನ್ನು ನಿರ್ವಹಿಸುತ್ತಿದ್ದೇನೆ. ಸುರಕ್ಷತೆಯ ಜೊತೆಗೆ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನನಗೆ ಹೆಮ್ಮೆ ಎನಿಸಿದೆ. – **ಶ್ರೀ ಚಲುವರಾಜು, ಮೈಸೂರು**

* * *

ಮಹಾಸ್ವಾಮಿಗಳವರ ಆಶೀರ್ವಾದವನ್ನು ಪಡೆಯಲು ಹಾಗೂ ಈ ಶಾಲೆಯಲ್ಲಿ ಓದುತ್ತಿರುವ ನನ್ನ ಮಕ್ಕಳನ್ನು ನೋಡಲು ಐದನೆ ಬಾರಿಗೆ ಸುತ್ತೂರು ಜಾತ್ರೆಗೆ ಬಂದಿದ್ದೇನೆ. ಕೇವಲ ಜ್ಞಾನ ದಾಸೋಹ ವಲ್ಲದೇ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಹೊಂದಲು ಶ್ರೀಕ್ಷೇತ್ರವು ನೆರವಾಗುತ್ತಿದೆ. ಈ ಕಾರಣಕ್ಕಾಗಿ ನಮ್ಮ ಮನೆಯ ಮಕ್ಕಳಿಗಲ್ಲದೆ ಎಲ್ಲಾ ಮಕ್ಕಳಿಗೆ ಈ ಶಿಕ್ಷಣ ಸೌಲಭ್ಯ ಸಿಗ ಬೇಕೆಂಬುದು ನನ್ನ ಮಹದಾಸೆಯಾಗಿದೆ. – **ಶ್ರೀಮತಿ ಕಮಲ. ವಿಜಯಪುರ**

* * *

ಸುತ್ತೂರು ಶಾಲೆಯಲ್ಲಿ ಓದುತ್ತಿರುವುದು ಹಾಗೂ ಜಾತ್ರಾ ಮಹೋತ್ಸವದಲ್ಲಿ ತೊಡಗಿಸಿಕೊಳ್ಳುವುದು ನನಗೆ ಸಂತೋಷವನ್ನು ಉಂಟುಮಾಡುತ್ತದೆ. ಜಾತ್ರಾ ರಜಾದಲ್ಲಿ ನನ್ನ ಊರಿಗೆ ಹೋಗುವ ಬದಲು ಇಲ್ಲೇ ಇರುವುದು ನನಗೆ ಖುಷಿಯಾಗುತ್ತದೆ.

– **ಕು ಪ್ರಕಾಶ್, ಸುತ್ತೂರು ಶಾಲಾ ವಿದ್ಯಾರ್ಥಿ**

* * *

ವ್ಯಾಪಾರಸ್ಥರಾಗಿ ಹಾಗೂ ಭಕ್ತರಾಗಿ ಈ ಜಾತ್ರೆಗೆ ಇಪ್ಪತ್ತು ವರ್ಷಗಳಿಂದು ಬರುತ್ತಿದ್ದೇವೆ ವ್ಯಾಪಾರದ ಉದ್ದೇಶವಲ್ಲದೇ, ಈ ಕ್ಷೇತ್ರದ ಮಹಿಮೆಯ ಬಗ್ಗೆ ನನಗೆ ಬಹಳ ಗೌರವವಿದೆ. ಬುದ್ದಿಯವರ ಆಶೀರ್ವಾದದಿಂದ ಎಲ್ಲಾ ಕಾರ್ಯಗಳು ಕ್ಷೇಮವಾಗಿ ನಡೆಯುತ್ತಿರುವುದು ಸಂತೋಷದಾಯಕವಾಗಿದೆ.

– **ಶ್ರೀಮತಿ ರೇಣುಕ, ಮಂಡ್ಯ**

ಅನುಷ.ಪಿ ಮತ್ತು ಮದನ್.ಕೆ.ಪಿ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವಮೂರ್ತಿಯ ಪ್ರಾಕಾರೋತ್ಸವ

ಸಾಂಸ್ಕೃತಿಕ ಕಾರ್ಯಕ್ರಮಗಳು



21 ಜನವರಿ 2020 ಮಂಗಳವಾರ

ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00ಕ್ಕೆ ನಾದಸ್ವರ, 9.00ಕ್ಕೆ ಜಾನಪದ ತಂಡಗಳಿಂದ ವಿವಿಧ ಕಲಾಪ್ರದರ್ಶನ, 10.30ಕ್ಕೆ ಮೇಲುಕೋಟೆಯ ವಿದ್ವಾನ್ ಎಂ.ಎನ್.ಪಿ. ರತ್ನಂರವರಿಂದ ಸ್ಯಾಕ್ಸೊಫೋನ್ ವಾದನ, ಮಧ್ಯಾಹ್ನ 12.00ಕ್ಕೆ ಹನುಮನಪುರದ ಶ್ರೀ ಹೆಚ್.ಎಂ. ಮಹೇಶ್ ಮತ್ತು ತಂಡದವರಿಂದ ಗಾನಲಹರಿ, 2.00ಕ್ಕೆ ಶಿವಮೊಗ್ಗದ ಶ್ರೀಮತಿ ಮಾಲತಿ ಲೋಕಪ್ಪ ಮತ್ತು ತಂಡದವರಿಂದ ಭಕ್ತಿಗೀತೆ ಮತ್ತು ಜನಪದ ಗೀತೆ ಕಾರ್ಯಕ್ರಮವಿರುತ್ತದೆ. ಸಂಜೆ 6.30ಕ್ಕೆ ಬೆಂಗಳೂರಿನ ಕು.ಪೂಜಿತಾ ಭಾಸ್ಕರ್‌ರವರಿಂದ ಭರತನಾಟ್ಯ, ರಾತ್ರಿ 7.30ಕ್ಕೆ ಬೆಂಗಳೂರಿನ ಬನಶಂಕರಿಯ ಜೆಎಸ್ಎಸ್ ಪಬ್ಲಿಕ್ ಶಾಲೆಯವರಿಂದ ಚಂದ್ರಮುಖಿ ನಾಟಕ ಪ್ರದರ್ಶನವಿರುತ್ತದೆ. ರಾತ್ರಿ 9.00 ಗಂಟೆಗೆ ಮೈಸೂರಿನ ಶ್ರೀ ಗುರು ಸಂಗೀತ ಕೇಂದ್ರದವರಿಂದ ಸುಗಮ ಸಂಗೀತ ಏರ್ಪಡಿಸಲಾಗಿದೆ.

ವಿಶೇಷ ರಥ

ಪ್ರಮುಖ ಧಾರ್ಮಿಕ ಕ್ಷೇತ್ರವಾದ ಸುತ್ತೂರು, ವಂಶಪಾರಂಪರ್ಯವಾಗಿ ಬಂದಿರುವ ರಥಶಿಲ್ಪ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕಲೆಯನ್ನು ಮುಂದುವರಿಸಿಕೊಂಡು ಹೊಗುತ್ತಿದ್ದು, ಜಾತ್ರೆಯ ಸಡಗರಕ್ಕೆ ಸಜ್ಜಾಗಿದೆ, ಜನವರಿ 23ರಂದು ಬೆಳಗ್ಗೆ 10.30ಕ್ಕೆ ರಥೋತ್ಸವ ನಡೆಯಲಿದೆ. ಈ ರಥವು ಬಹಳ ವಿಶೇಷವಾಗಿದ್ದು, 55 ಅಡಿ ಎತ್ತರ, 17 ಅಡಿ ಅಗಲವಿದ್ದು, 35 ರಿಂದ 40 ಟನ್ ಮರಗಳನ್ನು ಬಳಸಿ ತಯಾರಿಸಲಾಗಿದೆ. ಧಾರ್ಮಿಕ ಪರಂಪರೆಯಂತೆ ಇದರಲ್ಲಿ ಶ್ರೀಗಂಧ, ತೇಗ, ಮತ್ತಿ, ಹೊನ್ನೆ ಹಾಗೂ ಬನ್ನಿ ಮರಗಳಿದ್ದು, ಈ ಮರಗಳನ್ನು ಕಾರವಾರ ಜಿಲ್ಲೆಯ ಕಿರುವತ್ತಿ ಅರಣ್ಯ ಡಿಪೋದಿಂದ ತರಿಸಲಾಗಿದೆ. ಈ ರಥದಲ್ಲಿ 108 ಶಿವಲಿಂಗಗಳನ್ನು ಕೆತ್ತಲಾಗಿದೆ, 10 ನಂದಿಯ ತಲೆಗಳು, ಅಷ್ಟದಿಕ್ ಸರ್ಪಗಳು, ಅಷ್ಟದಿಗ್ಗಜಗಳು ಪಡಿ ಮೂಡಿವೆ. ಪ್ರಸ್ತುತ ಸಾಲಿನಲ್ಲಿ ರಥದ ಚಕ್ರವನ್ನು ಆಧುನಿಕ ತಂತ್ರಜ್ಞಾನ ಬಳಸಿಕೊಂಡು 35 ಡಿಗ್ರಿ ಕೋನಕ್ಕೆ ತಿರುಗುವಂತೆ ಹೊಸದಾಗಿ ರೂಪಿಸಲಾಗಿದೆ. ಈ ರಥದ ಶಿಲ್ಪಿಗಳಾದ ಬೆಂಗಳೂರಿನ ಶ್ರೀ ಬಸವರಾಜು ಎಸ್ ಬಡಿಗೇರ ಅವರು

ತಮ್ಮ ಇಬ್ಬರು ಮಕ್ಕಳಾದ ಶ್ರೀ ಶಿವಕುಮಾರ ಮತ್ತು ಶ್ರೀ ಎಚ್ಚರೀಶ್ ಅವರೂ ಈ ಕಲೆಯಲ್ಲಿ ಅಭಿರುಚಿ ಮೂಡಿಸಿದ್ದಾರೆ, ಈ ಮೂವರು ಒಟ್ಟಾಗಿ ಸೇರಿ ರಥವನ್ನು ರೂಪಿಸಿರುತ್ತಾರೆ. ಈ ಕುಟುಂಬದವರು 60ಕ್ಕೂ ಹೆಚ್ಚು ರಥಗಳನ್ನು ತಯಾರಿಸಿದ್ದಾರೆ. ರಥದ ಮುಂಭಾಗದಲ್ಲಿ ಶ್ರೀಮಠದ ಗುರುಪರಂಪರೆ ಹಾಗೂ ಶ್ರೀ ಮಲೆಮಹದೇಶ್ವರರ ಶಿಲ್ಪವನ್ನು ಕೆತ್ತಲಾಗಿದೆ. ರಥದ ಹಿಂಭಾಗದಲ್ಲಿ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಕಾರ್ತಿಕೇಯ ಮೂರ್ತಿಗಳಿವೆ, ಬಲಭಾಗದಲ್ಲಿ ಬ್ರಹ್ಮ ಸರಸ್ವತಿ, ವಿಷ್ಣು ಲಕ್ಷ್ಮಿ ಮತ್ತು ಶಿವಪಾರ್ವತಿಯರ ಶಿಲ್ಪಗಳಿದ್ದು ಎಡಭಾಗದಲ್ಲಿ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವಣ್ಣ, ಎಡೆಯೂರು ಸಿದ್ಧಲಿಂಗೇಶ್ವರ ಮೂರ್ತಿಗಳನ್ನು ಕೆತ್ತಲಾಗಿದೆ. ಇದೊಂದು ಅಪರೂಪದ ಸುಂದರವಾದ ಮಹಾರಥವಾಗಿ ಕಂಗೊಳಿಸುತ್ತಿದೆ. **– ಸಂಕ್ರಾಂತಿ ಬಸವಟ್ಟಿ**

ಜ್ಞಾನ–ವಿಜ್ಞಾನಗಳ ಸಂಗಮ

ಸುತ್ತೂರು ಶ್ರೀ ಕ್ಷೇತ್ರದ ಕಿರಿಯ ಶ್ರೀಗಳವರಾದ ಶ್ರೀ ಜಯರಾಜೇಂದ್ರ ಸ್ವಾಮಿಗಳವರನ್ನು ಸಂದರ್ಶಿಸಿದಾಗ ಆರು ದಿನಗಳು ನಡೆಯುವ ಜಾತ್ರಾ ಮಹೋತ್ಸವವನ್ನು ಕುರಿತು ಮಾತನಾಡಿದ ಅವರು ಜಾತ್ರೆಯು ವರ್ಷದಿಂದ ವರ್ಷಕ್ಕೆ ವೈವಿಧ್ಯಮಯವಾಗಿ ಮೂಡಿ ಬರುತ್ತಿದ್ದು, ರೈತರು ಮತ್ತು ಯುವಕರು ಹಾಗೂ ಗ್ರಾಮೀಣ ಮಹಿಳೆಯರಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವಂತಹದ್ದಾಗಿದೆ. ಜಾತ್ರೆಯು ಪ್ರಮುಖ ಆಕರ್ಷಣೆಯಾಗಿರುವ ವಸ್ತುಪ್ರದರ್ಶನ ಹಾಗೂ ಕೃಷಿ ಮೇಳದಲ್ಲಿರುವ "ಕೃಷಿ ಬ್ರಹ್ಮಾಂಡ"ವು ಕಳೆದ ಬಾರಿಯಂತೆ ಈ ವರ್ಷವು ರೈತರಿಗೆ ಸದುಪಯೋಗವಾಗುವಂತಿದೆ. ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ವ್ಯವಸ್ಥೆ ಮಾಡಿರುವುದು ಕೃಷಿಕರಿಗೆ



ಸಹಾಯಕವಾಗಿದೆ. ಜಾತಿ ಭೇದವಿಲ್ಲದೆ ಪ್ರತಿ ವರ್ಷದಂತೆ ಈ ವರ್ಷವೂ 176 ಜೋಡಿಗಳು ಸಾಮೂಹಿಕ ವಿವಾಹದಡಿಯಲ್ಲಿ ಸಪ್ತಪದಿ ತುಳಿಯಲಿದ್ದಾರೆ.

ಆಧುನಿಕ ಕ್ರೀಡೆಗಳ ಭರಾಟೆಯಲ್ಲಿ ದೇಸಿ ಕ್ರೀಡೆಗಳು ನಶಿಸುತ್ತಿದ್ದು, ಈ ಜಾತ್ರೆಯಲ್ಲಿ ಗೋಲಿ, ಬುಗುರಿ, ಅಳಿಗುಳಿ ಮನೆ ಹಾಗೂ ಕುಂಟಾಬಿಲ್ಲೆಯಂತಹ ಗ್ರಾಮೀಣ ದೇಸಿ ಆಟಗಳನ್ನು ಆಯೋಜಿಸಲಾಗಿದೆ.

ಈ ಜಾತ್ರೆಯು ಜ್ಞಾನ–ವಿಜ್ಞಾನಗಳ ಸಂಗಮವಾಗಿದ್ದು, ಶ್ರೀಮಠದ ಸಮಾಜ ಸೇವೆಯ ಬಗ್ಗೆ ಜನರಲ್ಲಿ ಶ್ರದ್ಧಾಭಕ್ತಿ ಅಪಾರವಾಗಿದೆ. ಪ್ರತಿವರ್ಷ ನಡೆಯುವ ಜಾತ್ರೆಗೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದು ಜಾತ್ರೆಗೆ ಮೆರುಗು ತಂದಿದೆ ಎಂದು ಕಿರಿಯ ಶ್ರೀಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. **–ಮಂದಾರ ಮತ್ತು ಚಂದನ**

ಪ್ಲಾಸ್ಟಿಕ್‌ಮುಕ್ತ ಸ್ಟೀಲ್‌ತಟ್ಟೆ ಸೂಕ್ತ

ಜಾತ್ರಾ ಮಹೋತ್ಸವದಲ್ಲಿ ಪ್ರಸಾದ ವಿತರಣೆಗಾಗಿ ಇದುವರೆಗೂ ಪ್ಲಾಸ್ಟಿಕ್ ಸಹಿತ ಪೇಪರ್ ತಟ್ಟೆಗಳನ್ನು ಬಳಸಲಾಗುತ್ತಿತ್ತು. ಆದರೆ ಕಳೆದ ವರ್ಷದಿಂದ ಪ್ಲಾಸ್ಟಿಕ್ ಮುಕ್ತಭಾರತ ಎಂಬ ಕೇಂದ್ರ ಸರ್ಕಾರದ ಯೋಜನೆಯಂತೆ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಇಂದು ಭಕ್ತಾದಿಗಳಿಗೆ ಪ್ರಸಾದ ವಿತರಿಸಲು ಸ್ಟೀಲ್ ತಟ್ಟೆಗಳನ್ನು ಬಳಸಲಾಗುತ್ತಿರುವುದು ವಿಶೇಷವಾಗಿದೆ. ಇದಕ್ಕಾಗಿ

46,000 ಸ್ಟೀಲ್ ತಟ್ಟೆಗಳನ್ನು ಗುಜರಾತಿನ ಶ್ರೀ ಭಾಗ್ಯೋದಯ ಮೆಟಲ್ಸ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ತರಿಸಿಕೊಳ್ಳಲಾಗಿದೆ. ಪ್ರಸಾದವನ್ನು ತಯಾರಿಸಲು ಹರಿಯಾಣದ ಜಗದ್ರಿಯಾ ಜೆ ಕೆ ಸ್ಟೀಲ್ ಇಂಡಸ್ಟ್ರೀಸ್ ಕಡೆಯಿಂದ ಅಲ್ಯೂಮಿನಿಯಂ ಪಾತ್ರೆಗಳನ್ನು ತರಿಸಿ ಬಳಸಿಕೊಳ್ಳಲಾಗಿದೆ. ಇವುಗಳನ್ನು ವಿ.ಆರ್.ಎಲ್ ಟ್ರಾನ್ಸ್‌ಪೋರ್ಟ್ ಮೂಲಕ ಶ್ರೀಕ್ಷೇತ್ರಕ್ಕೆ ತರಲಾಗಿದೆ. **–ತೇಜ**

ಶ್ರೀ ಕ್ಷೇತ್ರದಲ್ಲಿಂದು

ಸಂಜೆ 4.00ಕ್ಕೆ

ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳ, ದೇಸಿ ಆಟಗಳು, ದೋಣಿವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ, ಕ್ಯಾನ್ಸರ್ ತಪಾಸಣಾ ಶಿಬಿರ : ಉದ್ಘಾಟನೆ

ಸಮ್ಮುಖ : ಷ.ಬ್ರ.ಡಾ.ಶ್ರೀ ಜಯಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಗೌಡಗಾಂವ್ ಸಂಸದರು, ಸೊಲ್ಲಾಪುರ, ಷ.ಬ್ರ.ಡಾ. ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಕಲ್ಮಠ, ಹೊನ್ನಾಳಿ. **ಅಧ್ಯಕ್ಷತೆ :** ಶ್ರೀ ಎಂ. ವೀರಪ್ಪ ಮೊಯ್ಲಿ, ಮಾಜಿ ಮುಖ್ಯಮಂತ್ರಿಗಳು, ಮಾಜಿ ಕೇಂದ್ರ ಸಚಿವರು. **ವಸ್ತುಪ್ರದರ್ಶನ ಉದ್ಘಾಟನೆ :** ಶ್ರೀ ಗೋವಿಂದ ಎಂ. ಕಾರಜೋಳ, ಉಪ ಮುಖ್ಯಮಂತ್ರಿಗಳು. **ಕೃಷಿಮೇಳ ಉದ್ಘಾಟನೆ :** ಶ್ರೀ ಜೆ.ಸಿ. ಮಾಧುಸ್ವಾಮಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು. **ಸಾಂಸ್ಕೃತಿಕ ಮೇಳ ಉದ್ಘಾಟನೆ :** ಶ್ರೀ ನಳಿನ್‌ಕುಮಾರ್ ಕಟೀಲ್, ಲೋಕಸಭಾ ಸದಸ್ಯರು, ಬಿಜೆಪಿ ರಾಜ್ಯಾಧ್ಯಕ್ಷರು. **ದೇಸಿ ಆಟಗಳ ಉದ್ಘಾಟನೆ :** ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ, ಮಹಿಳಾ, ಮಕ್ಕಳ ಅಭಿವೃದ್ಧಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು. **ದೋಣಿ ವಿಹಾರ ಉದ್ಘಾಟನೆ :** ಶ್ರೀ ಅಣ್ಣಾಸಾಹೇಬ್ ಎಸ್. ಜೊಲ್ಲೆ, ಸಂಸದರು ಮತ್ತು ಅಧ್ಯಕ್ಷರು, ಕರ್ನಾಟಕ ಸಹಕಾರ ಎಣ್ಣೆಬೀಜ ಉತ್ಪಾದಕರ ಸಂಘ. **ರಂಗೋಲಿ ಸ್ಪರ್ಧೆ ಉದ್ಘಾಟನೆ :** ಶ್ರೀಮತಿ ರಾಣಿ ಸತೀಶ್, ಮಾಜಿ ಸಚಿವರು. **ಸೋಬಾನೆ ಪದ ಸ್ಪರ್ಧೆ ಉದ್ಘಾಟನೆ :** ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಮಾಜಿ ಸಚಿವರು. **ಕ್ಯಾನ್ಸರ್ ತಪಾಸಣಾ ಶಿಬಿರ ಉದ್ಘಾಟನೆ :** ಶ್ರೀ ಬಿ.ವೈ. ವಿಜಯೇಂದ್ರ, ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ ಯುವ ಮೋರ್ಚಾ. **ಅಭಿನಂದನೆ :** ಡಾ. ಎಚ್.ಎಸ್. ವೆಂಕಟೇಶಮೂರ್ತಿ, ನಿಯೋಜಿತ ಅಧ್ಯಕ್ಷರು, 85ನೇ ಕನ್ನಡ ಸಾಹಿತ್ಯ ಸಮ್ಮೇಳನ. **ಮುಖ್ಯ ಅತಿಥಿಗಳು :** ಶ್ರೀ ವಾಸು, ಮಾಜಿ ವಿಧಾನಸಭಾ ಸದಸ್ಯರು, ಶ್ರೀ ಟಿ. ವೆಂಕಟರಮಣಯ್ಯ, ವಿಧಾನಸಭಾ ಸದಸ್ಯರು, ದೊಡ್ಡಬಳ್ಳಾಪುರ, ಡಾ. ಸಿ. ರಾಮಚಂದ್ರ, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ.

ಸ್ವಚ್ಛತೆಗೆ ಮಾದರಿಯಾದ ಜಾತ್ರೆ

ಜಾತ್ರಾ ಮಹೋತ್ಸವದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದ್ದು, ಈ ಕಾರ್ಯಕ್ಕಾಗಿ ನೆರೆಹೊರೆಯ ಗ್ರಾಮದ ಸುಮಾರು 40 ರಿಂದ 50 ಮಂದಿ ಸೇವಕರನ್ನು ನೇಮಿಸಲಾಗಿದೆ.

ಇವರು ಮುಂಜಾನೆಯಿಂದ ರಾತ್ರಿಯವರೆಗೂ ಸಂಪೂರ್ಣವಾಗಿ ಸ್ವಚ್ಛತಾ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ವಿಶೇಷವಾಗಿ ಜಾತ್ರೆಯ ಮುಖ್ಯ ಸ್ಥಳವಾದ ಕರ್ತೃಗದ್ದುಗೆ ಆವರಣಕ್ಕೆ ಹೆಚ್ಚು ಆದ್ಯತೆ ನೀಡುವುದರೊಂದಿಗೆ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದು, ತಾತ್ಕಾಲಿಕ ಕುಟೀರಗಳು, ಪ್ರಮುಖ ರಸ್ತೆಗಳು, ಬಸ್ ನಿಲ್ದಾಣ, ವಸ್ತು ಪ್ರದರ್ಶನ ಹಾಗೂ ಕಾರ್ಯಕ್ರಮ ನಡೆಯುವ ಎಲ್ಲಾ ಸ್ಥಳಗಳಲ್ಲೂ ಸ್ವಚ್ಛತೆಯನ್ನು ಕಾಪಾಡುವಲ್ಲಿ ನಿರತರಾಗಿದ್ದಾರೆ.

ಲಕ್ಷಾಂತರ ಭಕ್ತಾದಿಗಳು ಜಾತ್ರೆಗೆ ಆಗಮಿಸುವುದರಿಂದ ಯಥೇಚ್ಚವಾಗಿ ಅನುಪಯುಕ್ತ ವಸ್ತುಗಳು ಎಲ್ಲಾ ಸ್ಥಳಗಳಲ್ಲೂ ಹರಡುವುದರಿಂದ ಸ್ವಚ್ಛತಾ ಕಾರ್ಯದಲ್ಲಿ ನಿರಂತರವಾಗಿ ಭಾಗಿಯಾಗುವ ಸೇವಕರು ಕಸವನ್ನು ರಾಶಿಮಾಡಿ ಟ್ರಾಕ್ಟರ್ ಮೂಲಕ ಸಾಗಿಸುವ ಕಾರ್ಯವನ್ನು ಎಡಬಿಡದೆ ಮಾಡಲು ಸಿದ್ದರಾಗಿದ್ದಾರೆ ಇವರ ಕಾರ್ಯವು ಎಲ್ಲರ ಮೆಚ್ಚುಗೆ ಗಳಿಸಿದೆ.

– ವಿನೋದ್.ಸಿ, ಆದರ್ಶ್

ಜಾತ್ರಾ ಮಹೋತ್ಸವ

ಪೂಜೆ – ಉತ್ಸವ

21 ಜನವರಿ 2020 ಮಂಗಳವಾರ

ಪ್ರಾತಃಕಾಲ 4.00 : ಕರ್ತೃಗದ್ದುಗೆ : ಅನುಜ್ಞೆ, ಮಹಾಸಂಕಲ್ಪಪೂರ್ವಕ ಮಹಾರುದ್ರಾಭಿಷೇಕ

ಬೆಳಗ್ಗೆ 6.30 : ಗ್ರಾಮದ ದೇವಸ್ಥಾನಗಳು : ವಿಶೇಷ ಪೂಜೆ

ಬೆಳಗ್ಗೆ 6.30 : ನಂದಿಗುಂದ : ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ

ಬೆಳಗ್ಗೆ 7.30 : ಷಟ್‌ಸ್ಥಲ ಧ್ವಜಾರೋಹಣ : ನಿ.ಪ್ರ.ಸ್ವ. ಶ್ರೀ ಪ್ರಭುಕಿರೀಟ ಸ್ವಾಮಿಗಳು, ಬಸವಗುರುಕುಲ, ಶಿವಮಠ, ದೊಡ್ಡ ಮರಳವಾಡಿ, ಕನಕಪುರ ತಾಲ್ಲೂಕು

ಧರ್ಮಸಂದೇಶ : ಷ.ಬ್ರ. ಶ್ರೀ ಮಹೇಶ್ವರ ಸ್ವಾಮಿಗಳು, ಶ್ರೀ ಕಾರ್ಯಸ್ವಾಮಿ ಮಠ, ಶ್ರೀ ರಾಮಲಿಂಗೇಶ್ವರ ಕ್ಷೇತ್ರ, ಸಂಗಮ

ಬೆಳಗ್ಗೆ 8.00 : ಕರ್ತೃಗದ್ದುಗೆ ಆವರಣ : ಶ್ರೀ ನಂಜುಂಡೇಶ್ವರ ನಂದಿ ಹಾಗೂ ವಿನಾಯಕ ಮೂರ್ತಿಗಳ ಪುನರ್ ಪ್ರತಿಷ್ಠಾಪನೆ, ಪೂಜೆಗಳ ಪ್ರಾರಂಭ

ಶ್ರೀಮಠ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವಮೂರ್ತಿಗೆ ಅಭಿಷೇಕ ಮತ್ತು ಮಹಾಮಂಗಳಾರತಿ

ಮಧ್ಯಾಹ್ನ 2.45 : ನಂದಿ ಧ್ವಜೋತ್ಸವ

ಮಧ್ಯಾಹ್ನ 3.00 : ಉತ್ಸವಮೂರ್ತಿಯನ್ನು ಶ್ರೀಮಠದಿಂದ ಕರ್ತೃಗದ್ದುಗೆಗೆ ಬಿಜಯಂಗೈಸುವುದು

ಸಂಜೆ 6.30 : ಶ್ರೀ ವೀರಭದ್ರೇಶ್ವರ ಕೊಂಡೋತ್ಸವ

ಸಂಜೆ 7.00 : ಮಹಾಮಂಗಳಾರತಿ

ರಾತ್ರಿ 7.15 : ಅಗ್ರೋದಕ, ಪುಣ್ಯಾಹ, ನಾಂದಿ, ಅಂಕುರಾರ್ಪಣ, ಕಲಶ ಸ್ಥಾಪನೆ

ಸುತ್ತೂರು ತಲುಪಿದ ಡಾ.ಶ್ರೀ ಶಿವಾನಂದ ಸ್ವಾಮಿಗಳ ಪಾದಯಾತ್ರೆ

ಸಮಾಜದಲ್ಲಿರುವ ಜಾತಿ ಬೇಧವನ್ನು ಹೋಗಲಾಡಿಸುವುದು, ಬಸವಣ್ಣನವರ ತತ್ವಗಳನ್ನು ಪ್ರಚುರ ಪಡಿಸುವುದು ಹಾಗೂ ರೈತರ ಆತ್ಮಹತ್ಯೆಯನ್ನು ತಡೆಯುವಂತೆ ಜಾಗೃತಿ ಮೂಡಿಸಲು ಬೀದರ್‌ನ ಬಸವ ಕಲ್ಯಾಣ ಹುಲಿಸೂರು ಶ್ರೀಗುರು ಬಸವೇಶ್ವರ ಸಂಸ್ಥಾನ ಮಠದ ನಿ.ಪ್ರ.ಸ್ವ ಡಾ. ಶ್ರೀ ಶಿವಾನಂದ ಸ್ವಾಮಿಗಳು ಪಾದಯಾತ್ರೆಯನ್ನು ದೇಶಾದ್ಯಂತ್ಯ ಕೈಗೊಂಡಿದ್ದಾರೆ.

ಬಸವ ಜಯಂತಿಯಂದು ಬೀದರ್‌ನಿಂದ ಪಾದಯಾತ್ರೆಯನ್ನು ಆರಂಭಿಸಿ ಮಹಾರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ, ನೇಪಾಳ, ಬಿಹಾರ್, ಜಾರ್ಖಾಡ್, ಒಡಿಸ್ಸಾ, ಆಂಧ್ರಪ್ರದೇಶ, ಕೇರಳ, ತಮಿಳುನಾಡು ಮತ್ತು ಕನ್ಯಾಕುಮಾರಿ ಮೂಲಕ ಕರ್ನಾಟಕ ಪ್ರವೇಶಿಸಿ ಹೆಚ್.ಡಿ ಕೋಟೆ ಮೂಲಕ ಸುತ್ತೂರಿಗೆ ತಲುಪಿದ್ದಾರೆ.

ಸುಮಾರು 11,000 ಕಿ.ಮೀ ಪಾದಯಾತ್ರೆಯನ್ನು ಪೂರೈಸಿ ಸುತ್ತೂರು ಶ್ರೀಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿರುವ ಶ್ರೀಗಳು. ಶ್ರೀಮಠದ ಬಗ್ಗೆ ಅತ್ಯಂತ ಭಕ್ತಿ ಮತ್ತು ಅಭಿಮಾನವನ್ನು ಹೊಂದಿದ್ದು, ಶ್ರೀಕ್ಷೇತ್ರಕ್ಕೆ ಯಾರೇ ಬಂದರೂ ಮನ ಪರಿವರ್ತನೆಯಾಗುತ್ತದೆ. ಇದೊಂದು ಧಾರ್ಮಿಕ ಕ್ಷೇತ್ರವಾಗಿದ್ದು, ಇತರೆ ಕ್ಷೇತ್ರಗಳಿಗೆ ಮಾದರಿಯಾಗಿದೆ. ಇಂದಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಅತ್ಯಂತ ಕ್ರಿಯಾಶೀಲರಾಗಿದ್ದು, ಶ್ರೀಮಠದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಪ್ರಸ್ತುತ ನಡೆಯುತ್ತಿರುವ ಜಾತ್ರೆಯು, ಮೈಸೂರು ಜಿಲ್ಲೆಗೆ ಮಾತ್ರ ಸೀಮಿತವಾಗದೆ, ಇದರ ಕೀರ್ತಿ ರಾಜ್ಯ ಹಾಗೂ ರಾಷ್ಟ್ರಮಟ್ಟಕ್ಕೂ ಹಬ್ಬಿದೆ. ಜಾತ್ರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳು ಸಮಾಜಮುಖಿಯಾಗಿದ್ದು, ಕೃಷಿ, ವಸ್ತುಪ್ರದರ್ಶನ, ಸಾಮೂಹಿಕ ವಿವಾಹ, ಅಕ್ಷರ ದಾಸೋಹ, ಅನ್ನದಾಸೋಹ, ಕುಸ್ತಿ ಎಲ್ಲವೂ ಸಹ ಶಿಸ್ತುಬದ್ಧವಾಗಿ ನಡೆಯುತ್ತಿದ್ದು, ಇತರೆ ಜಾತ್ರಾ ಮಹೋತ್ಸವಗಳಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆಯನ್ನು ಶ್ರೀಗಳು ವ್ಯಕ್ತಪಡಿಸಿದರು. – **ಹರ್ಷಿತ, ರಕ್ಷಿತ**

ಬಸವಜ್ಯೋತಿ ಸದ್ಭಾವನಾ ಪಾದಯಾತ್ರೆಯ ಮೂಲಕ ಶ್ರೀಕ್ಷೇತ್ರಕ್ಕೆ ಆಗಮಿಸಿದ ಡಾ. ಶ್ರೀ ಶಿವಾನಂದ ಸ್ವಾಮಿಗಳವರನ್ನು ಸ್ವಾಗತಿಸಿದ ಸಮಾರಂಭದಲ್ಲಿ ಪರಮಪೂಜ್ಯರು, ಡಾ. ಶರಶ್ಚಂದ್ರ ಸ್ವಾಮಿಗಳು, ಕಾನ್ಯ ಶಿವಮೂರ್ತಿ, ಪ್ರೊ. ಮೊರಬದ ಮಲ್ಲಿಕಾರ್ಜುನ ಮೊದಲಾದವರಿದ್ದಾರೆ.

ಬದುಕಿಗೆ ಬೇಕು ವ್ಯಾಪಾರ

ಜಾತ್ರೆಯ ಪ್ರಮುಖ ಅಂಗವಾಗಿರುವ ವ್ಯಾಪಾರವು ಜಾತ್ರೆಗೆ ಮೆರುಗನ್ನು ನೀಡುವುದಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಸುಮಾರು 115 ಮಳಿಗೆಗಳನ್ನು ತೆರೆದಿದ್ದು, ವ್ಯಾಪಾರಕ್ಕಾಗಿ ಸ್ಥಳವನ್ನು ನೀಡಲಾಗಿದೆ. ಚಾಮರಾಜನಗರ, ಮಂಡ್ಯ, ಮೈಸೂರು, ಗುಂಡ್ಲುಪೇಟೆ ಹೀಗೆ ಹಲವು ಸ್ಥಳದಿಂದ ಬಂದ ವ್ಯಾಪಾರಸ್ಥರಿಗೆ ಇಲ್ಲಿ ವ್ಯಾಪಾರ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಪೂಜಾಸಾಮಗ್ರಿಗಳು, ಅಲಂಕಾರಿಕ ವಸ್ತುಗಳು, ತಿಂಡಿ–ತಿನಿಸುಗಳು, ಮಕ್ಕಳ ಆಟಿಕೆಗಳು ಸೇರಿದಂತೆ ವಿವಿಧ ಅಂಗಡಿಗಳನ್ನು ತೆರೆಯಲಾಗುತ್ತದೆ. ಬಂದ ಜನರು ಜಾತ್ರೆಯನ್ನು ಕಣ್ತುಂಬಿಕೊಳ್ಳುವುದಲ್ಲದೆ ತಮಗೆ ಬೇಕಾದ ತಿಂಡಿ–ತಿನಿಸು, ಗೃಹ ಸಾಮಗ್ರಿಗಳು, ಮಕ್ಕಳ ಆಟಿಕೆಗಳನ್ನು ಕೊಳ್ಳುವುದರಲ್ಲಿ ನಿರತರಾಗಿರುತ್ತಾರೆ.

6 ದಿನಗಳು ನಡೆಯುವ ಜಾತ್ರೆಯಲ್ಲಿ ಲಾಭಗಳಿಸುವ ಹಾಗೂ ಹೆಚ್ಚು ಸಾಮಗ್ರಿಗಳನ್ನು ಮಾರಾಟ ಮಾಡುವ ಸಲುವಾಗಿ ಆಕರ್ಷಕ ಮಳಿಗೆಗಳನ್ನು ನಿರ್ಮಿಸಿಕೊಳ್ಳುತ್ತಿರುವ ವ್ಯಾಪಾರಗಾರರ ಕುತೂಹಲವನ್ನು ಕಾಣಬಹುದು. – **ಅನನ್ಯ ಜಿ ಎಸ್**

ಸಾಂಸ್ಕೃತಿಕ ಕಾರ್ಯಕ್ರಮಗಳ ಸೌರಭ

21 ಜನವರಿ 2020 ಮಂಗಳವಾರ : ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00ಕ್ಕೆ ನಾದಸ್ವರ, 9.00ಕ್ಕೆ ಜಾನಪದ ತಂಡಗಳಿಂದ ವಿವಿಧ ಕಲಾಪ್ರದರ್ಶನ, 10.30ಕ್ಕೆ ಮೇಲುಕೋಟೆಯ ವಿದ್ವಾನ್ ಎಂ.ಎನ್.ಪಿ. ರತ್ನಂ ರವರಿಂದ ಸ್ಯಾಕ್ಸೊಫೋನ್ ವಾದನ, ಮಧ್ಯಾಹ್ನ 12.00ಕ್ಕೆ ಹನುಮನಪುರದ ಶ್ರೀ ಹೆಚ್.ಎಂ. ಮಹೇಶ್ ಮತ್ತು ತಂಡದವರಿಂದ ಗಾನಲಹರಿ, 2.00ಕ್ಕೆ ಶಿವಮೊಗ್ಗದ ಶ್ರೀಮತಿ ಮಾಲತಿ ಲೋಕಪ್ಪ ಮತ್ತು ತಂಡದವರಿಂದ ಭಕ್ತಿಗೀತೆ ಮತ್ತು ಜನಪದ ಗೀತೆ ಕಾರ್ಯಕ್ರಮವಿರುತ್ತದೆ. ಸಂಜೆ 6.30ಕ್ಕೆ ಬೆಂಗಳೂರಿನ ಕು.ಪೂಜಿತಾ ಭಾಸ್ಕರ್‌ರವರಿಂದ ಭರತನಾಟ್ಯ, ರಾತ್ರಿ 7.30ಕ್ಕೆ ಬೆಂಗಳೂರಿನ ಬನಶಂಕರಿಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯವರಿಂದ ಚಂದ್ರಮುಖಿ ನಾಟಕ ಪ್ರದರ್ಶನವಿರುತ್ತದೆ. ರಾತ್ರಿ 9.00 ಗಂಟೆಗೆ ಮೈಸೂರಿನ ಶ್ರೀ ಗುರು ಸಂಗೀತ ಕೇಂದ್ರದವರಿಂದ ಸುಗಮ ಸಂಗೀತ ಏರ್ಪಡಿಸಲಾಗಿದೆ.

22 ಜನವರಿ 2020 ಬುಧವಾರ : ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00ಕ್ಕೆ ನಾದಸ್ವರ, 9.00ಕ್ಕೆ ನಂಜನಗೂಡಿನ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ) ಇವರ ವತಿಯಿಂದ ಯೋಗ ಪ್ರಾತ್ಯಕ್ಷಿಕೆ ಕಾರ್ಯಕ್ರಮವಿರುತ್ತದೆ. 10.30ಕ್ಕೆ ಬೀರೂರು ಮಲ್ಲಿಗೆ ಬಳಗದವರಿಂದ ವಚನ ಗಾಯನ, ಮಧ್ಯಾಹ್ನ 12.00ಕ್ಕೆ ಮೈಸೂರಿನ ಶ್ರೀಮತಿ ದಾಕ್ಷಾಯಿಣಿ ಉಮೇಶ್ ಮತ್ತು ವೃಂದದವರಿಂದ ಭಕ್ತಿಗೀತೆ ಮತ್ತು ಜನಪದ ಗೀತೆ, 1.00ಕ್ಕೆ ನಂಜನಗೂಡಿನ ಶ್ರೀಮತಿ ಎಸ್. ರೇಖಾ ಭಟ್‌ರವರಿಂದ ಸುಗಮ ಸಂಗೀತ, 2.00ಕ್ಕೆ ಚಾಮರಾಜನಗರ ದೊಡ್ಡಮೋಳೆಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ದೊಡ್ಡಗವಿ ಬಸಪ್ಪನವರಿಂದ ಜನಪದ ಗೀತೆ ಗಾಯನ, ಸಂಜೆ 6.30ಕ್ಕೆ ಮೈಸೂರಿನ ಅಂತರಾಷ್ಟ್ರೀಯ ಯೋಗ ಪಟು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕು. ಹೆಚ್. ಖುಷಿರವರಿಂದ ಯೋಗ ನೃತ್ಯ, ರಾತ್ರಿ 7.30ಕ್ಕೆ ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನವರಿಂದ ಮಂಟೇಸ್ವಾಮಿ ಕಥಾ ಪ್ರಸಂಗ ಎಂಬ ನಾಟಕ ಪ್ರದರ್ಶನವಿರುತ್ತದೆ ಹಾಗೂ ರಾತ್ರಿ 9.00ಕ್ಕೆ ಮೈಸೂರಿನ ಕು. ನಯನಾರವರಿಂದ ಸುಗಮ ಸಂಗೀತ ಗಾಯನವಿದೆ.

23 ಜನವರಿ 2020 ಗುರುವಾರ : ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00ಕ್ಕೆ ನಾದಸ್ವರ, 9.00ಕ್ಕೆ ಜನಪದ ತಂಡಗಳಿಂದ ವಿವಿಧ ಕಲಾಪ್ರದರ್ಶನ, ಮಧ್ಯಾಹ್ನ 2.00ಕ್ಕೆ ಕೋಲಾರದ ಕೀರ್ತನ ಕಲಾಭೂಷಣ ಶ್ರೀ ಎನ್.ಆರ್. ಜ್ಞಾನಮೂರ್ತಿರವರಿಂದ ಶಿವಕಥಾ ಸಂಕೀರ್ತನೆ ಹಾಗೂ ಸಂಜೆ 6.30ಕ್ಕೆ ದೊಡ್ಡಬಳ್ಳಾಪುರದ ನಾಟ್ಯ ಮಯೂರಿ ಕಲಾ ಕೇಂದ್ರದ ನೃತ್ಯವೈಭವದ ವರಿಂದ ಭರತನಾಟ್ಯ ಪ್ರದರ್ಶನವಿರುತ್ತದೆ. ರಾತ್ರಿ 7.30ಕ್ಕೆ ಬೆಂಗಳೂರಿನ ಹೆಚ್. ಎಸ್.ಆರ್. ಬಡಾವಣೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯವರಿಂದ 'ತಿರುಕನ ಕನಸು' ಮತ್ತು 'ಮಂಗಗಳ ಉಪವಾಸ' (ಪಠ್ಯಾಧಾರಿತ ನಾಟಕ) ಎಂಬ ನಾಟಕ ಪ್ರದರ್ಶನವಿರುತ್ತದೆ. ರಾತ್ರಿ 9.00 ಗಂಟೆಗೆ ಬೆಂಗಳೂರಿನ ಶ್ರೀ ವೆಂಕಟೇಶಮೂರ್ತಿ ಮತ್ತು ತಂಡದವರಿಂದ ಜನಪದ ಜಾದೂ ಪ್ರದರ್ಶನವಿದೆ.

24 ಜನವರಿ 2020 ಶುಕ್ರವಾರ : ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00 ಗಂಟೆಗೆ ನಾದಸ್ವರ, 9.00ಕ್ಕೆ ಜನಪದ ತಂಡಗಳಿಂದ ವಿವಿಧ ಕಲಾ ಪ್ರದರ್ಶನ, ಮಧ್ಯಾಹ್ನ 2.00ಕ್ಕೆ ಮೈಸೂರಿನ ಶಾರದಾದೇವಿ ಮಹಿಳಾ ಸಮಾಜ (ರಿ) ದವರಿಂದ ವಚನಗಾಯನ ಮತ್ತು ಜನಪದ ಗೀತೆಗಳು, 3.00ಕ್ಕೆ ಬೆಂಗಳೂರಿನ ಶ್ರೀ ಎಸ್.ವೆಂಕಟೇಶ್ ಮತ್ತು ತಂಡ (ನಿಮ್ಹಾನ್ಸ್)ದವರಿಂದ ಮೂರ್ಛೆ ರೋಗ ಕುರಿತು ಅರಿವು ಮತ್ತು ಕಿರು ನಾಟಕ ಪ್ರದರ್ಶನವಿರುತ್ತದೆ. ರಾತ್ರಿ 7.30ಕ್ಕೆ ಸುತ್ತೂರಿನ ಗಂಧರ್ವ ಗಾನ ತಂಡದವರಿಂದ ಸುಗಮ ಸಂಗೀತ, 8.00ಕ್ಕೆ ಮೈಸೂರಿನ ವಿದುಷಿ ಎಸ್. ಸೌಮ್ಯರಾಣಿ ಮತ್ತು ವೃಂದದವರಿಂದ ಭರತನಾಟ್ಯ, 9.00ಕ್ಕೆ ಬೆಂಗಳೂರಿನ ಕನ್ನಡ ಮಹಮದೀಯರ ಕಲಾ ಬಳಗದವರಿಂದ ಜನಪದ ಮತ್ತು ತತ್ವಪದ ಕಾರ್ಯಕ್ರಮ ಏರ್ಪಡಿಸಲಾಗಿದೆ.

25 ಜನವರಿ 2020 ಶನಿವಾರ : ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00 ಗಂಟೆಗೆ ನಾದಸ್ವರ, 9.00ಕ್ಕೆ ಜನಪದ ತಂಡಗಳಿಂದ ವಿವಿಧ ಕಲಾಪ್ರದರ್ಶನ, ಮಧ್ಯಾಹ್ನ 2.00ಕ್ಕೆ ಮೈಸೂರಿನ ವಿವೇಕಾನಂದನಗರದ ರಂಗ ಗೀತಾಂಜಲಿ ತಂಡದವರಿಂದ ರಂಗಗೀತೆಗಳು, 3.00ಕ್ಕೆ ಹಾಸನದ ಶ್ರೀ ರಮೇಶ್ ದೊಡ್ಡಹಳ್ಳಿರವರಿಂದ ಜನಪದ ಗಾಯನ, ಸಂಜೆ 6.30ಕ್ಕೆ ಮೈಸೂರಿನ ಶ್ರೀರಾಂಪುರದ ಅಪೂರ್ವ ಗಾನಲಹರಿ ತಂಡದವರಿಂದ ಸುಗಮ ಸಂಗೀತ, ರಾತ್ರಿ 7.30ಕ್ಕೆ ನಂಜನಗೂಡಿನ ನೂಪುರ ನೃತ್ಯಾಂಜಲಿ ನಾಟ್ಯಶಾಲೆಯ ಶಿವಮೃದಂಗಂರವರಿಂದ ಭರತನಾಟ್ಯ ಹಾಗೂ ಮೈಸೂರಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಕಾನೂನು ಸೇವೆಗಳ ಧ್ಯೇಯೋದ್ದೇಶಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ನಾಟಕ ಪ್ರದರ್ಶನವಿರುತ್ತದೆ. ರಾತ್ರಿ 9.00 ಗಂಟೆಗೆ ಮೈಸೂರಿನ ಡಾ. ಕಾ. ರಾಮೇಶ್ವರಪ್ಪ ಮತ್ತು ತಂಡದವರಿಂದ ಜನಪದವೇ ಸತ್ಯ, ಜನಪದವೇ ನಿತ್ಯ ಎಂಬ ಸಾಂಸ್ಕೃತಿಕ ಕಾರ್ಯಕ್ರಮವಿರುತ್ತದೆ.

26 ಜನವರಿ 2020 ಭಾನುವಾರ : ಗದ್ದುಗೆ ಆವರಣದಲ್ಲಿ ಬೆಳಗ್ಗೆ 7.30ಕ್ಕೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ತಿರುಳು ಕಾರ್ಯಕ್ರಮವಿರುತ್ತದೆ.

ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು ವಿವಿಧ ಸಮಿತಿಗಳ ಸಂಚಾಲಕರುಗಳಿಗೆ ಸಲಹೆ ಸೂಚನೆ ನೀಡುತ್ತಿರುವುದು

ಕಲಾರಸಿಕರಿಗೆ ಭರಪೂರ ರಸದೌತಣ ನೀಡುವ ನಾಟಕಗಳು

ಜಾತ್ರಾ ಮಹೋತ್ಸವದ ಅಂಗವಾಗಿ ಸುತ್ತೂರು ಶ್ರೀಕ್ಷೇತ್ರದ ವಿವಿಧ ಸ್ಥಳಗಳಲ್ಲಿ ಪ್ರತಿದಿನ ರಾತ್ರಿ 10.00 ಗಂಟೆಯಿಂದ ನಾಟಕ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. 21 ಜನವರಿ 2020ರ ಮಂಗಳವಾರ ಹಿರಿಯರ ಮನೆ ಆವರಣದಲ್ಲಿ, ಮೈಸೂರು ತಾಲ್ಲೂಕು ಮೆಲ್ಲಹಳ್ಳಿಯ ಶ್ರೀರಾಮ ಕೃಪಾಪೋಷಿತ ನಾಟಕ ಮಂಡಳಿಯವರಿಂದ ದಕ್ಷಯಜ್ಞ ನಾಟಕ ಪ್ರದರ್ಶನಗೊಳ್ಳಲಿದೆ. ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದ ಆವರಣದಲ್ಲಿ ಮೈಸೂರು ಚಾಮುಂಡಿಪುರಂನ ಶ್ರೀ ರೇಣುಕಾ ಕಲಾವೃಂದದವರಿಂದ ಸಂಪೂರ್ಣ ರಾಮಾಯಣ ನಾಟಕ ಪ್ರದರ್ಶನವಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಟಿ.ಎಂ. ಹೊಸೂರಿನ ಶ್ರೀ ಸಿದ್ಧಪ್ಪಾಜಿ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಶ್ರೀ ಧರೆಗೆ ದೊಡ್ಡವರ ಮಹಾತ್ಮೆ ಅಥವಾ ಶ್ರೀ ಸಿದ್ಧಪ್ಪಾಜಿ ಲೀಲಾ ಪವಾಡಗಳು ನಾಟಕ ಪ್ರದರ್ಶನಗೊಳ್ಳಲಿದೆ. ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹದ ಹಿಂಭಾಗ, ಟಿ.ನರಸೀಪುರ ಬೆನಕನಹಳ್ಳಿಯ ಶ್ರೀ ಬಿ.ಜಿ. ಗುರುಸ್ವಾಮಿ ಕಲಾ ಪ್ರತಿಷ್ಠಾನ (ರಿ.) ಇವರ ವತಿಯಿಂದ ದಕ್ಷಯಜ್ಞ ನಾಟಕ ಪ್ರದರ್ಶನಗೊಳ್ಳಲಿದೆ.

22 ಜನವರಿ 2020ರ ಬುಧವಾರ ಹಿರಿಯರ ಮನೆ ಆವರಣದಲ್ಲಿ, ನಂಜನಗೂಡು ಬಿಳುಗಲಿಯ ಶ್ರೀ ಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ ನಾಟಕ ಪ್ರದರ್ಶನಗೊಳ್ಳಲಿದೆ. ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದ ಆವರಣದಲ್ಲಿ ಟಿ.ನರಸೀಪುರ ಬೆನಕನಹಳ್ಳಿಯ ಶ್ರೀ ಬೆನಕ ಯುವಕ ರೈತ ಕಲಾಸಂಘದವರಿಂದ ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ ನಾಟಕ ಪ್ರದರ್ಶನವಿದೆ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣದಲ್ಲಿ ಟಿ.ನರಸೀಪುರ ತಾಲ್ಲೂಕು ಬೀಡನಹಳ್ಳಿಯ ಶ್ರೀ ನಂದಿಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಮಹಿಷಾಸುರ ಮರ್ದಿನಿ ನಾಟಕ ಪ್ರದರ್ಶನಗೊಳ್ಳಲಿದೆ, ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹದ ಹಿಂಭಾಗ ನಂಜನಗೂಡು ತಾಲ್ಲೂಕು ಮಲ್ಲಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಕೃಪಾಪೋಷಿತ ನಾಟಕ ಮಂಡಳಿಯವರ ವತಿಯಿಂದ ಶಿವಲೀಲಾಮೃತ ಅಥವಾ ಕೌಂಡ್ಲಿಕನ ವಧೆ ನಾಟಕ ಪ್ರದರ್ಶನವಿರುತ್ತದೆ.

23 ಜನವರಿ 2020ರ ಗುರುವಾರ ಹಿರಿಯರ ಮನೆ ಆವರಣದಲ್ಲಿ ಸುತ್ತೂರಿನ ಶ್ರೀ ಶಿವರಾತ್ರೀಶ್ವರ ಕಲಾ ಸಂಘದವರಿಂದ ಭಕ್ತ ಪ್ರಹ್ಲಾದ ನಾಟಕ ಪ್ರದರ್ಶನವಿದ್ದು, ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದ ಆವರಣದಲ್ಲಿ ನಂಜನಗೂಡು ಮೂಡಹಳ್ಳಿಯ ಶ್ರೀ ಸೋಮೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ ನಾಟಕ ಪ್ರದರ್ಶನಗೊಳ್ಳಲಿದೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣದಲ್ಲಿ ನಂಜನಗೂಡು ತಾಲ್ಲೂಕು, ಕೊಂತಯ್ಯನಹುಂಡಿಯ ಶ್ರೀ ಮಂಟೇಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿಯವರಿಂದ ರುಕ್ಮಿಣಿ ಸ್ವಯಂವರ ನಾಟಕ ಪ್ರದರ್ಶನಗೊಳ್ಳಲಿದೆ.

24 ಜನವರಿ 2020ರ ಶುಕ್ರವಾರ ಹಿರಿಯರ ಮನೆ ಆವರಣದಲ್ಲಿ ನಂಜನಗೂಡಿನ ದೇವೀರಮ್ಮನಹಳ್ಳಿ ಬಡಾವಣೆಯ ಶ್ರೀ ಗುರುಮಲ್ಲೇಶ್ವರ ಕಲಾಬಳಗದವರಿಂದ ಶ್ರೀ ಪ್ರಭುಲಿಂಗಲೀಲೆ ನಾಟಕ ಪ್ರದರ್ಶನಗೊಳ್ಳಲಿದೆ, ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದ ಆವರಣದಲ್ಲಿ, ಮೈಸೂರು ತಾಲ್ಲೂಕು, ವರುಣದ ಶ್ರೀ ಕದಗರೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಭಕ್ತ ಪ್ರಹ್ಲಾದ ನಾಟಕ ಪ್ರದರ್ಶನ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣದಲ್ಲಿ ಟಿ.ನರಸೀಪುರ ತಾಲ್ಲೂಕು ಮೇಗಳಕೊಪ್ಪಲಿನ ಶ್ರೀ ಬದನವಾಳು ಸಿದ್ಧೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ದಕ್ಷಯಜ್ಞ ಅಥವಾ ಶಿವಲೀಲಾ ನಾಟಕ ಪ್ರದರ್ಶನ ಹಾಗೂ ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹದ ಹಿಂಭಾಗದಲ್ಲಿ ಬೆಂಗಳೂರು ನಗರ ಜಿಲ್ಲೆ ಆನೇಕಲ್‌ನ ಗಡಿನಾಡು ರಂಗಭೂಮಿ ಕಲಾವಿದರ ಬಳಗದವರಿಂದ ದಕ್ಷಯಜ್ಞ ನಾಟಕ ಪ್ರದರ್ಶನವಿರುತ್ತದೆ.

25 ಜನವರಿ 2020ರ ಶನಿವಾರ ಹಿರಿಯರ ಮನೆ ಆವರಣದಲ್ಲಿ, ನಂಜನಗೂಡು ತಾಲ್ಲೂಕು ಗೆಜ್ಜಿಗನಹಳ್ಳಿಯ ಶ್ರೀ ಬಸವೇಶ್ವರ ಕಲಾಸಂಘದವರಿಂದ ದಕ್ಷಯಜ್ಞ ನಾಟಕ ಪ್ರದರ್ಶನಗೊಳ್ಳಲಿದೆ. ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದ ಆವರಣದಲ್ಲಿ ಮಳವಳ್ಳಿ ತಾಲ್ಲೂಕು ಕಿರುಗಾವಲಿನ ಶ್ರೀ ಅಂಕನಾಥೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ ನಾಟಕ ಪ್ರದರ್ಶನವಿರುತ್ತದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣದಲ್ಲಿ ನಂಜನಗೂಡು ತಾಲ್ಲೂಕು, ಪಿ.ಮರಹಳ್ಳಿಯ ಶ್ರೀ ಶನೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ರಾಜಾ ವಿಕ್ರಮ ನಾಟಕ ಪ್ರದರ್ಶನವಿದೆ ಹಾಗೂ ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹದ ಹಿಂಭಾಗ ಹೆಚ್.ಡಿ. ಕೋಟೆಯ ಜೈ ಭೀಮ್ ಮೈಸೂರು ಜಿಲ್ಲಾ ರಂಗಕಲಾ ಮತ್ತು ಸಾಂಸ್ಕೃತಿಕ ಸಂಘದವರಿಂದ ಕುರುಕ್ಷೇತ್ರ ನಾಟಕ ಪ್ರದರ್ಶನಗೊಳ್ಳಲಿದೆ.

ಮಠಾಧೀಶರು, ಗಣ್ಯರು, ಅತಿಥಿಗಳ ಆಗಮನ

(ಮೊದಲ ಪುಟದಿಂದ)

ಡಾ. ಸಿ. ರಾಮಚಂದ್ರರವರು ಆಗಮಿಸಲಿದ್ದಾರೆ.

ದಿನಾಂಕ 22 ಜನವರಿ 2020ನೇ ಬುಧವಾರ ಬೆಳಗ್ಗೆ 10.00 ಗಂಟೆಗೆ ಸಾಮೂಹಿಕ ವಿವಾಹ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದಲ್ಲಿ ಹರಗುರು ಚರಮೂರ್ತಿಗಳಾದ ಶ್ರೀ ಕನಕಪುರ ದೇಗುಲಮಠದ ನಿ.ಪ್ರ.ಸ್ವ. ಡಾ. ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳು ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ರಾಜರ್ಷಿ ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ವಹಿಸಲಿದ್ದು, ಅಧ್ಯಕ್ಷತೆಯನ್ನು ಶಾಸಕರು, ಮಾಜಿ ಸಚಿವರು ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು ವಹಿಸಲಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ನೆರವೇರಿಸಲಿದ್ದು, ನೂತನ ವಧು-ವರರಿಗೆ ಮಾಂಗಲ್ಯ ವಿತರಣೆಯನ್ನು ಕಂದಾಯ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್. ಅಶೋಕ್‌ರವರು ಮಾಡಲಿದ್ದಾರೆ. ಪ್ರತಿಜ್ಞಾವಿಧಿ ಬೋಧನೆಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಹಾ ಜಂಟಿಕಾರ್ಯದರ್ಶಿಗಳಾದ ಶ್ರೀ ಮುಕುಂದ್‌ರವರು ಬೋಧಿಸಲಿದ್ದಾರೆ. ಪರಿಕರಗಳ ವಿತರಣೆಯನ್ನು ಕರ್ನಾಟಕ ವಿಧಾನಪರಿಷತ್‌ನ ವಿರೋಧಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್‌ರವರು ಮಾಡಲಿದ್ದು, ನೂತನ ವಧು-ವರರಿಗೆ ಪ್ರಮಾಣಪತ್ರಗಳನ್ನು ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿರವರು ವಿತರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರು ಹಾಗೂ ಶಾಸಕರು ಆದ ಶ್ರೀ ಅಲ್ಲಂ ವೀರಭದ್ರಪ್ಪನವರು, ಧಾರವಾಡದ ವಿಧಾನಸಭಾ ಸದಸ್ಯರಾದ ಶ್ರೀ ಅರವಿಂದ್ ಸಿ. ಬೆಲ್ಲದ್‌ರವರು, ಬೇಲೂರಿನ ವಿಧಾನಸಭಾ ಸದಸ್ಯರಾದ ಶ್ರೀ ಕೆ.ಎಸ್. ಲಿಂಗೇಶ್‌ರವರು, ಚಿತ್ರದುರ್ಗದ ವಿಧಾನಪರಿಷತ್ ಸದಸ್ಯರಾದ ಶ್ರೀ ಜಿ. ರಘು ಆಚಾರ್‌ರವರು, ಮಂಡ್ಯದ ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು, ದಾವಣಗೆರೆಯ ಉದ್ಯಮಿಗಳಾದ ಶ್ರೀ ಎಸ್.ಎಸ್. ಗಣೇಶ್‌ರವರು ಹಾಗೂ ಶ್ರೀಮತಿ ರೇಖಾ ಗಣೇಶ್‌ರವರು ಪಾಲ್ಗೊಳ್ಳಲಿದ್ದಾರೆ.

22 ಜನವರಿ 2020ನೇ ಬುಧವಾರ ಸಂಜೆ 4.00 ಗಂಟೆಗೆ ರಾಜ್ಯಮಟ್ಟದ ಭಜನಾ ಮೇಳ ಉದ್ಘಾಟನಾ ಕಾರ್ಯಕ್ರಮವಿದ್ದು, ಕಾರ್ಯಕ್ರಮದಲ್ಲಿ ಹರಗುರು ಚರಮೂರ್ತಿಗಳಾದ ಹಂಪಿಯ ಹೇಮಕೂಟ ಶ್ರೀ ಗಾಯತ್ರಿಪೀಠ ಮಹಾಸಂಸ್ಥಾನ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ದಯಾನಂದಪುರಿ ಮಹಾಸ್ವಾಮಿಗಳು, ತಿಪಟೂರಿನ ಶ್ರೀ ಕೆರಗೋಡಿ-ರಂಗಾಪುರ ಸುಕ್ಷೇತ್ರದ ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳು ಹಾಗೂ ಮೈಸೂರಿನ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್‌ರವರು ದಿವ್ಯ ಸಮ್ಮುಖ ವಹಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ವಹಿಸಲಿದ್ದು, ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿಗಳು ಹಾಗೂ ವಿರೋಧಪಕ್ಷದ ನಾಯಕರು ಆದ ಶ್ರೀ ಸಿದ್ಧರಾಮಯ್ಯನವರು ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರು ಹಾಗೂ ಶಾಸಕರು ಆದ ಶ್ರೀ ಎಂ.ಬಿ. ಪಾಟೀಲ್‌ರವರು, ರಾಜ್ಯಸಭಾ ಸದಸ್ಯರಾದ ಡಾ. ಪ್ರಭಾಕರ ಬ. ಕೋರೆರವರು, ಮಾಜಿ ಸಚಿವರು ಹಾಗೂ ಶಾಸಕರುಗಳಾದ ಶ್ರೀ ಯು.ಟಿ. ಖಾದರ್‌ರವರು, ಶ್ರೀ ಎಸ್.ಎ. ರಾಮದಾಸ್‌ರವರು, ಶ್ರೀ ಸಿ. ಪುಟ್ಟರಂಗಶೆಟ್ಟಿರವರು, ಮಾಜಿ ಸಚಿವರುಗಳಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿರವರು ಡಾ. ಗೀತಾ ಮಹದೇವಪ್ರಸಾದ್‌ರವರು, ನಂಜನಗೂಡಿನ ವಿಧಾನಸಭಾ ಸದಸ್ಯರಾದ ಶ್ರೀ ಬಿ. ಹರ್ಷವರ್ಧನ್, ಮೈಸೂರಿನ ಪ್ರಾದೇಶಿಕ ಆಯುಕ್ತರಾದ ಶ್ರೀ ವಿ. ಯಶವಂತ್, ದಕ್ಷಿಣ ವಲಯದ ಆರಕ್ಷಕ ಮಹಾನಿರೀಕ್ಷಕರಾದ ಶ್ರೀ ವಿಪುಲ್ ಕುಮಾರ್‌ರವರು ವಹಿಸಲಿದ್ದಾರೆ.

23 ಜನವರಿ 2020ನೇ ಗುರುವಾರ ಬೆಳಗ್ಗೆ 10.30ಕ್ಕೆ ರಥೋತ್ಸವವನ್ನು ಹಾಗೂ 11.15ಕ್ಕೆ ಧಾರ್ಮಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಹರಗುರು ಚರಮೂರ್ತಿಗಳಾದ ಶ್ರವಣಬೆಳಗೊಳದ ಶ್ರೀ ಜೈನ ಮಠದ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಹಾಗೂ ಸೋಸಲೆಯ ಶ್ರೀ ವ್ಯಾಸರಾಜ ಮಠದ ಶ್ರೀ 1008 ವಿದ್ಯಾಶ್ರೀಶ ತೀರ್ಥ ಶ್ರೀಪಾದರು ದಿವ್ಯ ಸಮ್ಮುಖ ವಹಿಸಲಿದ್ದಾರೆ. ಮೈಸೂರಿನ ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ಉಪ ಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವಥ್ ನಾರಾಯಣ್‌ರವರು ವಹಿಸಲಿದ್ದು, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡರವರು ಸಭೆಯ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಸಮಾರಂಭದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಶ್ರೀ ಎಂ.ಪಿ. ರೇಣುಕಾಚಾರ್ಯ, ಹಿರೇಕೆರೂರಿನ ವಿಧಾನಸಭಾ ಸದಸ್ಯರಾದ ಶ್ರೀ ಬಿ.ಸಿ. ಪಾಟೀಲ್, ಬೆಂಗಳೂರು ವಿಧಾನಪರಿಷತ್ ಸದಸ್ಯರಾದ ಶ್ರೀ ವೈ.ಎ. ನಾರಾಯಣಸ್ವಾಮಿ, ಮಾಜಿ ಲೋಕಸಭಾ ಸದಸ್ಯರಾದ ಶ್ರೀ ಆರ್. ಧ್ರುವನಾರಾಯಣ, ಈರೋಡ್ ಜಿಲ್ಲೆ ಭವಾನಿಸಾಗರದ ವಿಧಾನಸಭಾ ಸದಸ್ಯರಾದ ಶ್ರೀ ಈಶ್ವರನ್ ಹಾಗೂ ಜಯನಗರದ ವಿಧಾನಸಭಾ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ವಿಶೇಷ ಉಪನ್ಯಾಸವನ್ನು ಮಂಗಳೂರಿನ ಶಾಂತಿ ಪ್ರಕಾಶನದ ವ್ಯವಸ್ಥಾಪಕರಾದ ಶ್ರೀ ಮಹಮದ್ ಕುಂಞಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್‌ರವರು, ಮೈಸೂರಿನ ಸಂತ ಜೋಸೆಫರ ದೇವಾಲಯದ ಪ್ರಧಾನ ಧರ್ಮಗುರುಗಳಾದ ರೆ.ಫಾ. ಸ್ಟ್ಯಾನ್ಲಿ ಡಿ' ಅಲ್ಮೆಡಾರವರು ನೀಡಲಿದ್ದಾರೆ.

23 ಜನವರಿ 2020ನೇ ಗುರುವಾರ ಸಂಜೆ 4.00 ಗಂಟೆಗೆ ಐವತ್ತೆರಡನೆಯ ದನಗಳ ಜಾತ್ರೆ : ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ದಿವ್ಯ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ದಾವಣಗೆರೆ ಜಿಲ್ಲೆ ಕಣ್ವಕುಪ್ಪೆಯ ಶ್ರೀ ಗವಿಮಠದ ಷ.ಬ್ರ.ಡಾ. ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಹಾಗೂ ಮೈಸೂರಿನ ಶ್ರೀ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮಿಗಳು ವಹಿಸಲಿದ್ದಾರೆ.

ಗಣಿ, ಭೂವಿಜ್ಞಾನ, ಅರಣ್ಯ ಮತ್ತು ಪರಿಸರ ಸಚಿವರಾದ ಶ್ರೀ ಸಿ.ಸಿ. ಪಾಟೀಲರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದು, ದನಗಳ ಜಾತ್ರೆಯ ಉದ್ಘಾಟನೆಯನ್ನು ಪಶುಸಂಗೋಪನೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ ಶ್ರೀ ಪ್ರಭು ಬಿ. ಚವ್ಹಾಣ್‌ರವರು ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರು ಹಾಗೂ ಶಾಸಕರುಗಳಾದ ಶ್ರೀ ತನ್ವೀರ್ ಸೇಠ್, ಶ್ರೀ ಎನ್. ಮಹೇಶ್, ಮಾಜಿ ಸಚಿವರು ಹಾಗೂ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರಾಜ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಹನೂರಿನ ವಿಧಾನಸಭಾ ಸದಸ್ಯರಾದ ಶ್ರೀ ಆರ್. ನರೇಂದ್ರ, ಪಿರಿಯಾಪಟ್ಟಣದ ವಿಧಾನಸಭಾ ಸದಸ್ಯರಾದ ಶ್ರೀ ಕೆ. ಮಹದೇವ್, ಬೊಮ್ಮನಹಳ್ಳಿಯ ವಿಧಾನಸಭಾ ಸದಸ್ಯರಾದ ಶ್ರೀ ಎಂ. ಸತೀಶ್ ರೆಡ್ಡಿ, ಮೈಸೂರಿನ ವಿಧಾನಪರಿಷತ್ ಸದಸ್ಯರಾದ ಶ್ರೀ ಆರ್. ಧರ್ಮಸೇನ, ಮಾಜಿ ಸಚಿವರಾದ ಶ್ರೀ ಬಿ. ಸೋಮಶೇಖರ್, ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಶ್ರೀ ಶಂಕರ ಮಹಾದೇವ ಬಿದರಿ, ಕೆಪಿಸಿಸಿ (ಮಹಿಳಾ ಘಟಕ)ಯ ಅಧ್ಯಕ್ಷರಾದ ಡಾ. ಪುಷ್ಪ ಅಮರನಾಥ್‌ರವರು ಆಗಮಿಸಲಿದ್ದಾರೆ.

(7ನೇ ಪುಟಕ್ಕೆ)

ಮಠಾಧೀಶರು, ಗಣ್ಯರು, ಅತಿಥಿಗಳ ಆಗಮನ

(ಆರನೇ ಪುಟದಿಂದ)

24 ಜನವರಿ 2020ನೇ ಶುಕ್ರವಾರ

ಬೆಳಗ್ಗೆ 10.30ಕ್ಕೆ ಸಾವಯವ ಕೃಷಿ ಮತ್ತು ಜಲ ವೈಜ್ಞಾನಿಕ ಬಳಕೆ ಬಗ್ಗೆ ಕೃಷಿ ವಿಚಾರಸಂಕಿರಣ ಹಾಗೂ ಗಾಳಿಪಟ ಸ್ಪರ್ಧೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸಮಾರಂಭದ ದಿವ್ಯ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ಬೆಳಗಾವಿ ಜಿಲ್ಲೆಯ ಚಿಂಚಣಿ ಶ್ರೀ ಸಿದ್ಧಸಂಸ್ಥಾನ ಮಠದ ನಿ.ಪ್ರ.ಸ್ವ. ಶ್ರೀ ಅಲ್ಲಮಪ್ರಭು ಸ್ವಾಮಿಗಳು, ಹೊಸದುರ್ಗದ ಶ್ರೀ ಭಗೀರಥ ಉಪ್ಪಾರ ಪೀಠದ ಜಗದ್ಗುರು ಡಾ. ಶ್ರೀ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳು ವಹಿಸಲಿದ್ದಾರೆ.

ಬಿಜೆಪಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ಕೃಷಿ ವಿಚಾರಸಂಕಿರಣ ಉದ್ಘಾಟನೆಯನ್ನು ಅಬಕಾರಿ, ಕೌಶಲಾಭಿವೃದ್ಧಿ, ಜೀವನೋಪಾಯ ಮತ್ತು ಉದ್ಯಮಶೀಲತೆ ಸಚಿವರಾದ ಶ್ರೀ ಹೆಚ್. ನಾಗೇಶ್‌ರವರು ನೆರವೇರಿಸಲಿದ್ದು, ಗಾಳಿಪಟ ಸ್ಪರ್ಧೆಯ ಉದ್ಘಾಟನೆಯನ್ನು ಮಾಜಿ ಸಚಿವರು ಹಾಗೂ ಶಾಸಕರು ಆದ ಶ್ರೀ ಎಚ್.ಕೆ. ಪಾಟೀಲ್‌ರವರು ನೆರವೇರಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಮಾಜಿ ಸಚಿವರು, ಶಾಸಕರು ಹಾಗೂ ಕೆಪಿಸಿಸಿ ಅಧ್ಯಕ್ಷರು ಆದ ಶ್ರೀ ದಿನೇಶ್ ಗುಂಡೂರಾವ್‌ರವರು, ಉತ್ತರ ಪ್ರದೇಶದ ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಸ್ವತಂತ್ರ ದೇವ್ ಸಿಂಗ್‌ರವರು, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಕೃಷ್ಣ ಭೈರೇಗೌಡರವರು, ಶಿವಮೊಗ್ಗದ ವಿಧಾನಪರಿಷತ್ ಸದಸ್ಯರಾದ ಶ್ರೀ ಎಸ್. ರುದ್ರೇಗೌಡರವರು, ಹುಣಸೂರಿನ ವಿಧಾನಸಭಾ ಸದಸ್ಯರಾದ ಶ್ರೀ ಹೆಚ್.ಪಿ. ಮಂಜುನಾಥ್‌ರವರು, ಚೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎಚ್.ಎನ್. ಗೋಪಾಲಕೃಷ್ಣರವರು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರಪ್ರಸಾದ್‌ರವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ಷಡಕ್ಷರಿರವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ವಿಶೇಷ ಉಪನ್ಯಾಸವನ್ನು ವಿಜಯಪುರದ ಪ್ರಗತಿಪರ ಕೃಷಿಕರಾದ ಶ್ರೀ ರಾಜಶೇಖರ್ ಆರ್. ನಿಂಬರಗಿರವರು ಹಾಗೂ ಬಾಗಲಕೋಟೆಯ ಪ್ರಗತಿಪರ ಕೃಷಿಕರಾದ ಶ್ರೀ ಧರೆಪ್ಪ ಪರಪ್ಪ ಕಿತ್ತೂರುರವರು ನಡೆಸಿಕೊಡಲಿದ್ದಾರೆ.

24 ಜನವರಿ 2020ನೇ ಶುಕ್ರವಾರ

ಸಂಜೆ 4.00ಕ್ಕೆ ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭ ಹಾಗೂ ಸಾವಯವ ಕೃಷಿ ಮತ್ತು ಜಲ-ವೈಜ್ಞಾನಿಕ ಬಳಕೆ ಬಗೆಗಿನ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ದಿವ್ಯ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ಕಲಬುರಗಿ ಜಿಲ್ಲೆಯ ಮಾದನ ಹಿಪ್ಪರಗಿಯ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠದ ನಿ.ಪ್ರ.ಸ್ವ. ಶ್ರೀ ಅಭಿನವ ಶಿವಲಿಂಗ ಸ್ವಾಮಿಗಳು ಹಾಗೂ ಕೆ.ಆರ್. ನಗರದ ಶ್ರೀ ಕನಕಗುರು ಶಾಖಾ ಮಠದ ಡಾ. ಶ್ರೀ ಶಿವಾನಂದಪುರಿ ಸ್ವಾಮಿಗಳು ವಹಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಉಪ ಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ್ ಎಸ್. ಸವದಿರವರು ವಹಿಸಲಿದ್ದು, ಸಮಾರೋಪ ಭಾಷಣವನ್ನು ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವರಾದ ಶ್ರೀ ಪ್ರಹ್ಲಾದ್ ವಿ. ಜೋಷಿರವರು ಮಾಡಲಿದ್ದಾರೆ.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕೇರಳದ ಶಿಕ್ಷಣ ಸಚಿವರಾದ ಶ್ರೀ ಸಿ. ರವೀಂದ್ರನಾಥ್‌ರವರು, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಆರ್.ವಿ. ದೇಶಪಾಂಡೆ, ಲೋಕಸಭಾ ಸದಸ್ಯರಾದ ಶ್ರೀಮತಿ ಸುಮಲತಾ ಅಂಬರೀಷ್‌ರವರು, ಮೈಸೂರಿನ ವಿಧಾನಪರಿಷತ್ ಸದಸ್ಯರಾದ ಶ್ರೀ ಸಂದೇಶ್ ನಾಗರಾಜ್‌ರವರು, ಸಾವಯವ ಕೃಷಿ ಮಿಷನ್‌ನ ಅಧ್ಯಕ್ಷರಾದ ಡಾ. ಆ.ಶ್ರೀ ಆನಂದರವರು, ಮೈಸೂರಿನ ಜಿಲ್ಲಾಧಿಕಾರಿಗಳಾದ ಶ್ರೀ ಅಭಿರಾಂ ಜಿ. ಶಂಕರ್‌ರವರು, ಮೈಸೂರಿನ ಜಿಲ್ಲಾ ಪಂಚಾಯತ್ ಸಿಇಓರವರಾದ ಶ್ರೀಮತಿ ಕೆ. ಜ್ಯೋತಿರವರು, ಐಸಿಎಆರ್-ಎಟಿಎಆರ್‌ಐನ ನಿರ್ದೇಶಕರಾದ ಡಾ. ಎಂ.ಜಿ. ಚಂದ್ರೇಗೌಡರವರು ಪಾಲ್ಗೊಳ್ಳಲಿದ್ದಾರೆ.

ವಿಶೇಷ ಉಪನ್ಯಾಸವನ್ನು ಕೋಲಾರದ ಪ್ರಗತಿಪರ ಕೃಷಿಕರಾದ ಶ್ರೀ ಎಸ್. ಅಶೋಕ್‌ಕುಮಾರ್‌ರವರು ಹಾಗೂ ತುಮಕೂರಿನ ಪ್ರಗತಿಪರ ಕೃಷಿಕರಾದ ಶ್ರೀ ಮಹಾಲಿಂಗಯ್ಯರವರು ನೆರವೇರಿಸಿಕೊಡಲಿದ್ದಾರೆ.

ಇದೇ ದಿನ ರಾತ್ರಿ 7.00 ಗಂಟೆಗೆ ಮಹಾತ್ಮಾ ಗಾಂಧಿಯವರ ಬದುಕು ಮತ್ತು ಸಂದೇಶದ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

25 ಜನವರಿ 2020ನೇ ಶನಿವಾರ ಬೆಳಗ್ಗೆ 10.30ಕ್ಕೆ ಚಿತ್ರ ಕಲಾ ಸ್ಪರ್ಧೆಯ ಉದ್ಘಾಟನೆ ಹಾಗೂ ಭಜನಾ ಮೇಳದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ದಿವ್ಯ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ಅಮೆರಿಕದ ಹವಾಯಿಯ ಹಿಂದೂ ಮೊನ್ಯಾಸ್ಟೆರಿಯಾದ ಶ್ರೀ ಸದ್ಗುರು ಬೋಧಿನಾಥ ವೇಲಾಯನ ಸ್ವಾಮಿಗಳು ಮತ್ತು ಮಹಾರಾಷ್ಟ್ರದ ಮುಖೇಡ್‌ನ ಶ್ರೀ ಗಣಾಚಾರ್ಯ ಸಂಸ್ಥಾನ ಮಠದ ಷ.ಬ್ರ.ಡಾ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ವಹಿಸಲಿದ್ದಾರೆ.

ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ಶ್ರೀ ಸುರೇಶ್ ಸಿ. ಅಂಗಡಿರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ಉದ್ಘಾಟನೆಯನ್ನು ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿರವರು ನೆರವೇರಿಸಲಿದ್ದು, ಪ್ರವಾಸೋದ್ಯಮ, ಕನ್ನಡ ಸಂಸ್ಕೃತಿ ಮತ್ತು ಸಕ್ಕರೆ ಸಚಿವರಾದ ಶ್ರೀ ಸಿ.ಟಿ.ರವಿರವರು ಸಮಾರೋಪ ಭಾಷಣ ಮಾಡಲಿದ್ದಾರೆ.

ಭಜನಾ ಮೇಳದಲ್ಲಿ ಪಾಲ್ಗೊಂಡು ಬಹುಮಾನ ಪಡೆದ ತಂಡಗಳಿಗೆ ಬಹುಮಾನ ವಿತರಣೆಯನ್ನು ಪುರುಷರ ತಂಡಕ್ಕೆ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಶಾಸಕರು ಆದ ಡಾ. ಜಿ. ಪರಮೇಶ್ವರರವರು ಮಾಡಲಿದ್ದು, ಮಹಿಳೆಯರ ತಂಡಕ್ಕೆ ಯಶವಂತಪುರದ ವಿಧಾನಸಭಾ ಸದಸ್ಯರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ವಿತರಿಸಲಿದ್ದಾರೆ. ಏಕತಾರಿ ತಂಡಕ್ಕೆ ಬಹುಮಾನವನ್ನು ಮಾಜಿ ಸಚಿವರು ಹಾಗೂ ಸಂಸದರು ಆದ ಕು. ಶೋಭಾ ಕರಂದ್ಲಾಜೆರವರು ನೀಡಲಿದ್ದು, ಮಕ್ಕಳ ತಂಡಕ್ಕೆ ಮಾಜಿ ಸಚಿವರು, ಶಾಸಕರು ಹಾಗೂ ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷರಾದ ಶ್ರೀ ಈಶ್ವರ್ ಬಿ. ಖಂಡ್ರೆರವರು ವಿತರಿಸುವರು.

ಸಮಾರಂಭದಲ್ಲಿ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್‌ರವರು, ಶ್ರೀ ಎಂ. ಕೃಷ್ಣಪ್ಪರವರು, ಹೆಚ್.ಡಿ. ಕೋಟೆಯ ವಿಧಾನಸಭಾ ಸದಸ್ಯರಾದ ಶ್ರೀ ಅನಿಲ್‌ಕುಮಾರ್ ಚಿಕ್ಕಮಾದುರವರು, ಬೆಂಗಳೂರು ಆಕಾಶವಾಣಿಯ ಕಾರ್ಯಕ್ರಮ ಮುಖ್ಯಸ್ಥರಾದ ಶ್ರೀಮತಿ ನಿರ್ಮಲ ಸಿ. ಎಲಿಗಾರರವರು, ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಸಿ. ನಾಗಣ್ಣರವರು ಮುಖ್ಯ ಅಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

25 ಜನವರಿ 2020ನೇ ಶನಿವಾರ

ಮಧ್ಯಾಹ್ನ 2.00ಕ್ಕೆ ಕುಸ್ತಿ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ. (8ನೇ ಪುಟಕ್ಕೆ)

ಛಾಯಾಚಿತ್ರಗಳು: ವಾಟಾಳ್ ಆನಂದ್, ಬಿ.ಎನ್. ನಿಜಲಿಂಗಪ್ಪ, ಎನ್. ಶಶಾಂಕ್, ಕಿರಣ್, ಸುತ್ತೂರು ನಂಜುಂಡನಾಯಕ

ಮಠಾಧೀಶರು, ಗಣ್ಯರು, ಅತಿಥಿಗಳ ಆಗಮನ

(ಏಳನೇ ಪುಟದಿಂದ)

ಸಮಾರಂಭದ ದಿವ್ಯ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಷ.ಬ್ರ.ಡಾ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಹಾಗೂ ತುಮಕೂರು ಜಿಲ್ಲೆಯ ಬೆಟ್ಟದಹಳ್ಳಿ ಶ್ರೀ ಗವಿಮಠದ ನಿ.ಪ್ರ.ಸ್ವ. ಶ್ರೀ ಚಂದ್ರಶೇಖರ ಸ್ವಾಮಿಗಳು ವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಬಿ. ಶ್ರೀರಾಮುಲುರವರು ವಹಿಸಲಿದ್ದು, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಕುಸ್ತಿ ಪಂದ್ಯಾವಳಿಯಲ್ಲಿ ಸ್ಪರ್ಧಿಸಿ ಗೆದ್ದ ಸ್ಪರ್ಧಿಗಳಿಗೆ "ಸುತ್ತೂರು ಕುಮಾರ" ಪ್ರಶಸ್ತಿಯನ್ನು ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಹೆಚ್.ಡಿ. ರೇವಣ್ಣನವರು ಹಾಗೂ "ಸುತ್ತೂರು ಕೇಸರಿ" ಪ್ರಶಸ್ತಿಯನ್ನು ಲೋಕಸಭಾ ಸದಸ್ಯರಾದ ಶ್ರೀ ಪ್ರತಾಪ ಸಿಂಹರವರು ವಿತರಣೆ ಮಾಡಲಿದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು, ಮಂಡ್ಯ ವಿಧಾನಸಭಾ ಸದಸ್ಯರಾದ ಶ್ರೀ ಎಂ. ಶ್ರೀನಿವಾಸ್‌ರವರು, ಕೊಯಮತ್ತೂರು ಜಿಲ್ಲೆಯ ವಿಧಾನಸಭಾ ಸದಸ್ಯರಾದ ಶ್ರೀ ಎಟ್ಟಿಮಡೈ ಎ. ಷಣ್ಮುಗಂರವರು, ಗುಂಡ್ಲುಪೇಟೆ ವಿಧಾನಸಭಾ ಸದಸ್ಯರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್‌ರವರು, ಮೈಸೂರಿನ ವಿಧಾನಸಭಾ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು, ಟಿ.ನರಸೀಪುರದ ವಿಧಾಸಭಾ ಸದಸ್ಯರಾದ ಶ್ರೀ ಎಂ. ಅಶ್ವಿನ್‌ಕುಮಾರ್‌ರವರು, ಶ್ರೀರಂಗಪಟ್ಟಣದ ವಿಧಾಸಭಾ ಸದಸ್ಯರಾದ ಶ್ರೀ ರವೀಂದ್ರ ಶ್ರೀಕಂಠಯ್ಯರವರು, ಮೈಸೂರು ಜಿಲ್ಲೆಯ ಆರಕ್ಷಕ ಅಧೀಕ್ಷಕರಾದ ಶ್ರೀ ಸಿ.ಬಿ. ರಿಷ್ಯಂತ್‌ರವರು ಆಗಮಿಸಲಿದ್ದಾರೆ.

25 ಜನವರಿ 2020ನೇ ಶನಿವಾರ ಸಂಜೆ 5.00ಕ್ಕೆ ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ಸುಕ್ಷೇತ್ರ ಹರಿಹರದ ಜಗದ್ಗುರು ವೀರಶೈವ–ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು ಹಾಗೂ ಬೆಂಗಳೂರಿನ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಶ್ರೀ ಪ್ರಕಾಶನಾಥ ಸ್ವಾಮಿಗಳು ವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ವಹಿಸಲಿದ್ದು, ಮಾಜಿ ಮುಖ್ಯಮಂತ್ರಿಗಳು ಹಾಗೂ ಶಾಸಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿರವರು ಸಮಾರೋಪ ಭಾಷಣ ಮಾಡಲಿದ್ದಾರೆ.

ಪಾರಿತೋಷಕ ವಿತರಣೆಯನ್ನು ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಸಿ.ಎಸ್. ಪುಟ್ಟರಾಜುರವರು ಮಾಡಲಿದ್ದು, ಸಾಂಸ್ಕೃತಿಕ ಮೇಳದ ಬಹುಮಾನವನ್ನು ಮಾಜಿ ಸಚಿವರು ಹಾಗೂ ಶಾಸಕರು ಆದ ಶ್ರೀ ಅರವಿಂದ ಲಿಂಬಾವಳಿರವರು ವಿತರಣೆ ಮಾಡಲಿದ್ದಾರೆ. ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಸಾ.ರಾ. ಮಹೇಶ್‌ರವರು ಫಲಕ ವಿತರಿಸಿ ಗೌರವಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಮಾಜಿ ಉಪಸಭಾಪತಿಗಳು ಹಾಗೂ ಶಾಸಕರು ಆದ ಶ್ರೀ ಮರಿತಿಬ್ಬೇಗೌಡರವರು, ಜಾತ್ಯತೀತ ಜನತಾದಳದ ರಾಜ್ಯಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಮಾಲೂರು ವಿಧಾನಸಭಾ ಸದಸ್ಯರಾದ ಶ್ರೀ ಕೆ.ವೈ. ನಂಜೇಗೌಡ, ಬಳ್ಳಾರಿಯ ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯ, ಊಟಿಯ ವಿಧಾನಸಭಾ ಸದಸ್ಯರಾದ ಶ್ರೀ ಆರ್. ಗಣೇಶ್‌ರವರು, ವಿಶ್ವ ವೀರಶೈವ–ಲಿಂಗಾಯತ ಒಕ್ಕೂಟದ ಅಧ್ಯಕ್ಷರು ಹಾಗೂ ನಿವೃತ್ತ ಎಡಿಜಿಪಿ ಶ್ರೀ ಬಿ.ಜಿ. ಜ್ಯೋತಿಪ್ರಕಾಶ್ ಮಿರ್ಜಿರವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಇದೇ ಸಮಾರಂಭದ ಸುಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ವೃಕ್ಷಸಂರಕ್ಷಕರಾದ ಶ್ರೀಮತಿ ಸಾಲುಮರದ ತಿಮ್ಮಕ್ಕರವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

26 ಜನವರಿ 2020ನೇ ಭಾನುವಾರ ಬೆಳಗ್ಗೆ 8.00ಕ್ಕೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರಿನಲ್ಲಿ 71ನೇ ಗಣರಾಜ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ಮಲ್ಲನಮೂಲೆ ಸುಕ್ಷೇತ್ರದ ಶ್ರೀ ಗುರುಕಂಬಳೀಶ್ವರ ಮಠದ ಶ್ರೀ ಶ್ರೀ ಚನ್ನಬಸವ ಸ್ವಾಮಿಗಳು ಹಾಗೂ ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಶ್ರೀ ಮಹಾಂತ ಸ್ವಾಮಿಗಳು ವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಬಿ.ಸಿ. ಪರಿಮಳಾ ಶ್ಯಾಮ್‌ರವರು ವಹಿಸಲಿದ್ದು, ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಬಿ.ಜೆ. ಪುಟ್ಟಸ್ವಾಮಿರವರು ಧ್ವಜಾರೋಹಣವನ್ನು ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಾದ ಶ್ರೀಮತಿ ಗೌರಮ್ಮ ಸೋಮಶೇಖರ್ ರವರು, ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಸಿದ್ದೇಗೌಡರವರು, ಅಥಣಿಯ ವಿಮೋಚನಾ ಸಂಘದ ಅಧ್ಯಕ್ಷರಾದ ಶ್ರೀ ಬಿ.ಎಲ್. ಪಾಟೀಲ್‌ರವರು, ಬನ್ನಾರಿ ಶುಗರ್ಸ್ ಲಿ.,ನ ಸಿ.ಎಂ.ಡಿ.ಯಾದ ಶ್ರೀ ಎಸ್.ವಿ. ಬಾಲಸುಬ್ರಹ್ಮಣ್ಯಂರವರು, ಬೆಂಗಳೂರಿನ ಉದ್ಯಮಿಗಳಾದ ಶ್ರೀ ಹೆಚ್.ಎಸ್. ಸೋಮಶೇಖರ್, ಶ್ರೀ ಮೂಲ್‌ಚಂದ್ ನಹರ್ ಹಾಗೂ ಶ್ರೀ ಪಿ. ನಿರಂಜನ್‌ರವರು, ಮಹಾರಾಷ್ಟ್ರ ಧಾನವಾಡದ ಸಮಾಜ ಸೇವಕರಾದ ಶ್ರೀ ಜೆ.ಆರ್. ಪಾಟೀಲ್‌ರವರು, ಕೊಳ್ಳೇಗಾಲದ ಗೌಡರ ಮುದ್ದುವೀರಪ್ಪ ಸ್ಮಾರಕ ಆಸ್ಪತ್ರೆಯ ಡಾ.ಎಸ್. ಶಿವರುದ್ರಸ್ವಾಮಿರವರು, ಮಹಾಲಕ್ಷ್ಮೀ ಸ್ವೀಟ್ಸ್ ಮಾಲೀಕರಾದ ಶ್ರೀ ಶಿವಕುಮಾರ್‌ರವರು ಭಾಗವಹಿಸಲಿದ್ದಾರೆ.

26 ಜನವರಿ 2020ನೇ ಭಾನುವಾರ ಬೆಳಗ್ಗೆ 10.30ಕ್ಕೆ ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಸಮ್ಮುಖವನ್ನು ಹರಗುರು ಚರಮೂರ್ತಿಗಳಾದ ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ನಿ.ಪ್ರ.ಸ್ವ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಹಾಗೂ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ವಹಿಸಲಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಮಾರೋಪ ಭಾಷಣವನ್ನು ನೆರವೇರಿಸಲಿದ್ದು, ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರಾದ ಶ್ರೀ ವಿ. ಸೋಮಣ್ಣರವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಬಹುಮಾನವನ್ನು ಕೃಷಿ ಮೇಳ ವಿಭಾಗಕ್ಕೆ ಮಾಜಿ ಸಚಿವರು ಹಾಗೂ ಸಂಸದರಾದ ಶ್ರೀ ವಿ. ಶ್ರೀನಿವಾಸಪ್ರಸಾದ್‌ರವರು, ಶೈಕ್ಷಣಿಕ ಮತ್ತು ವಿಜ್ಞಾನ ವಿಭಾಗಕ್ಕೆ ಚಿಕ್ಕಬಳ್ಳಾಪುರ ವಿಧಾನಸಭಾ ಸದಸ್ಯರಾದ ಡಾ. ಕೆ. ಸುಧಾಕರ್‌ರವರು, ವರುಣ ವಿಧಾನಸಭಾ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯನವರು ವಸ್ತುಪ್ರದರ್ಶನ ವಿಭಾಗಕ್ಕೆ ವಿತರಣೆ ಮಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡರವರು, ಮಳವಳ್ಳಿ ವಿಧಾನಸಭಾ ಸದಸ್ಯರಾದ ಡಾ. ಕೆ. ಅನ್ನದಾನಿರವರು, ಮಾಜಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿರವರು, ಅಡ್ವೊಕೇಟ್ ಜನರಲ್‌ರವರಾದ ಶ್ರೀ ಪ್ರಭುಲಿಂಗ್ ಕೆ. ನಾವದಗಿ, ಅಕ್ಕ ಸಮ್ಮೇಳನ–2020ರ ಅಧ್ಯಕ್ಷರಾದ ಶ್ರೀ ತುಮಕೂರು ದಯಾನಂದರವರು, ಅಕ್ಕ ವಿಶ್ವಸ್ತ ಮಂಡಳಿಯ ಅಧ್ಯಕ್ಷರಾದ ಶ್ರೀ ಅಮರನಾಥ ಗೌಡರವರು ಹಾಗೂ ಅಮೆರಿಕದ ಉದ್ಯಮಿಗಳಾದ ಶ್ರೀ ಶಿವಮೂರ್ತಿ ಕೀಲಾರವರು ಪಾಲ್ಗೊಳ್ಳಲಿದ್ದಾರೆ.

ಹಿರಿಯ ವಿದ್ಯಾರ್ಥಿಗಳ ಸಮಾವೇಶ

25 ರಂದು ಹಿರಿಯ ವಿದ್ಯಾರ್ಥಿಗಳ ಸಮಾವೇಶ ಬೆಳಗ್ಗೆ 11.00 ಗಂಟೆಗೆ ಸುತ್ತೂರು ಶ್ರೀಮಠದ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಮಾವೇಶವನ್ನು ಸುತ್ತೂರು ಶಾಲಾ ಆವರಣದ ಶ್ರೀ ಅಲ್ಲಮಪ್ರಭು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದು, ಸಮಾವೇಶದ ಅಧ್ಯಕ್ಷತೆಯನ್ನು ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಶ್ರೀ ಎಲ್. ರೇವಣ್ಣಸಿದ್ದಯ್ಯನವರು ವಹಿಸಲಿದ್ದಾರೆ.

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore-570 015